ಆಳ್ವಾಸ್ ನುಡಿಸಿರಿ ೨೦೧೮

ಅಧ್ಯಕ್ಷರ ಆಶಯ ಭಾಷಣ



ಆಳ್ವಾಸ್
ಶಿಕ್ಷಣ ಪ್ರತಿಷ್ಠಾನ (ರಿ.)
ಮೂಡುಬಿದಿರೆ



ಪ್ರೀತಿಯಿಂದ...

ಕನ್ನಡ ಸೇವೆ ಸರಕಾರದ ಕೆಲಸ ಮಾತ್ರ ಅಲ್ಲ; ಅದು ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯವೆಂದು ಮನಗಂಡು ಮೂಡುಬಿದಿರೆಯಲ್ಲಿ ನಡೆದ ೭೧ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಸಂಘಟನೆಯ ಗುಣಾತ್ಮಕ ಅಂಶಗಳ ಸಾಕಾರ ರೂಪವಾಗಿ ಮೂಡಿಬಂದುದು ಆಳ್ವಾಸ್ ನುಡಿಸಿರಿ. ಕಳೆದ ೧೪ ವರ್ಷಗಳಲ್ಲಿ ಕನ್ನಡ ನಾಡು-ನುಡಿ-ಸಂಸ್ಕೃತಿ ವಿಚಾರವಾಗಿ ಕನ್ನಡಿಗರನ್ನು ಒಟ್ಟು ಸೇರಿಸುತ್ತಾ, ನಾವು ಕನ್ನಡಿಗರೆಂಬ ಸ್ವಾಭಿಮಾನದ ಕೆಚ್ಚೆದೆಯನ್ನು ಪ್ರದರ್ಶಿಸುವಂತೆ ಈ ಸಮ್ಮೇಳನ ನಡೆದುಕೊಂಡು ಬರುತ್ತಿದೆ. ಸ್ವಾಭಿಮಾನಿ ಕನ್ನಡಿಗರ ಅಭಿಮಾನ, ಪ್ರೀತಿ, ವಿಶ್ವಾಸಗಳು ಜಗದಗಲದಿಂದ ಹರಿದು ಬಂದು ಆಳ್ವಾಸ್ ನುಡಿಸಿರಿಗೆ ಅದರದೇ ಆದ ಅನನ್ಯತೆ ಪ್ರಾಪ್ತಿಯಾಗಿ ಕನ್ನಡ ಸೇವೆ ನಿರಂತರವಾಗಿ ಮುಂದುವರಿಯುತ್ತಿದೆ. ಕನ್ನಡ ಸೇವೆ ಕೇವಲ ಸಮ್ಮೇಳನಕ್ಕಷ್ಟೇ

ಸೀಮಿತವಾಗಬಾರದೆಂದು ಹಲವು ಮಗ್ಗುಲುಗಳಲ್ಲಿ ಯೋಚಿಸಿದ ಪರಿಣಾಮ ೫ ಕೋಟಿ ವಾರ್ಷಿಕ ಆಯವ್ಯಯದ ಪ್ರತಿವರ್ಷ ೭೦೦ಕ್ಕೂ ಅಧಿಕ ವಿದ್ಯಾರ್ಥಿಗಳಿರುವ ೬ರಿಂದ ೧೦ನೇ ತರಗತಿಯವರೆಗೆ ಶೂನ್ಯ ಶುಲ್ಕ, ಸಂಪೂರ್ಣ ಉಚಿತ ಶಿಕ್ಷಣದ ಕನ್ನಡ ಮಾಧ್ಯಮ ಶಾಲೆ, ರಾಜ್ಯದ ಪ್ರತಿ ಜಿಲ್ಲೆ, ರಾಷ್ಟ್ರ-ಅಂತಾರಾಷ್ಟ್ರೀಯವಾಗಿ ಕನ್ನಡ ಸಂಸ್ಕೃತಿ ವೈಭವ ಪ್ರಸ್ತುತಿಯ ಆಳ್ವಾಸ್ ಸಾಂಸ್ಕೃತಿಕ ತಂಡ, ಕಲೆ-ಸಂಸ್ಕೃತಿ ಪ್ರೇರಿತ ಆಳ್ವಾಸ್ ಚಟುವಟಿಕೆಗಳು ಹಾಗೂ ಆವರಣದ ಕಲೆಗಾರಿಕೆಗಳು ಕನ್ನಡತ್ವ ಪ್ರಸರಣದ ಅಳಿಲು ಸೇವೆಗೆಂದೇ ರೂಪುಗೊಂಡವು.

ಕರ್ನಾಟಕ ದರ್ಶನ : ಬಹುರೂಪಿ ಆಯಾಮಗಳು

ಆಳ್ವಾಸ್ ನುಡಿಸಿರಿ ೧೫ನೇ ವರ್ಷದ ಹೊಸ್ತಿಲಲ್ಲಿದ್ದೇವೆ. ಎಂದಿನಂತೆ ಪ್ರಧಾನ ಪರಿಕಲ್ಪನೆಯೊಂದರ ಅಧೀನವಾಗಿಯೇ ಈ ಸಮ್ಮೇಳನ ನಡೆಯುತ್ತಿದೆ. 'ಕರ್ನಾಟಕ ದರ್ಶನ : ಬಹುರೂಪಿ ಆಯಾಮಗಳು' ಎನ್ನುವುದು ಈ ವರ್ಷದ ಪ್ರಧಾನ ಪರಿಕಲ್ಪನೆ. ಗೋಷ್ಠಿಯ ಸ್ವರೂಪದಲ್ಲಾದ ಅಲ್ಪ ಬದಲಾವಣೆಯನ್ನು ಹೊರತುಪಡಿಸಿದಂತೆ ಈ ಸಮ್ಮೇಳನದಲ್ಲಿ ಹೆಚ್ಚಿನ ಇತರೇ ಬದಲಾವಣೆಗಳಿಲ್ಲ.

ಕರ್ನಾಟಕದ ಲಿಖಿತ ಹಾಗೂ ಮೌಖಿಕ ಇತಿಹಾಸಗಳನ್ನು ಅವಲೋಕಿಸುವಾಗ ಕರ್ನಾಟಕತ್ವ, ಕನ್ನಡತ್ವವನ್ನು ರೂಪಿಸಿದ ವೈವಿಧ್ಯಮಯ ಕಾಣ್ಕೆ, ಐತಿಹ್ಯ, ಚರಿತ್ರೆ, ತಾತ್ವಿಕತೆ ಮುಂತಾದವುಗಳು ಅಗಾಧವಾಗಿ ನಮ್ಮ ಗಮನ ಸೆಳೆಯುತ್ತವೆ. ಅವುಗಳು ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಸಮಾಜ, ರಾಜಕೀಯ, ಶೈಕ್ಷಣಿಕ, ಜಾನಪದ, ಧಾರ್ಮಿಕವೇ ಮೊದಲಾದ ವಿಚಾರಗಳ ಆಲೋಚನೆ ಮತ್ತು ಆಚರಣೆಗಳಲ್ಲಿ ಗೋಚರವಾಗುತ್ತವೆ. ಇವುಗಳು ಕಾಲದಿಂದ ಕಾಲಕ್ಕೆ ಕನ್ನಡ ನಾಡನ್ನು ಕಟ್ಟುತ್ತಾ ಸುಧಾರಣೆಗೆ ಒಳಪಡಿಸುತ್ತಾ ಕರ್ನಾಟಕದ ಅನನ್ಯತೆ ಹಾಗೂ ಅಸ್ಮಿತೆಗಳನ್ನು ಆಂತರಿಕವಾಗಿಯೂ ಬಾಹ್ಯವಾಗಿಯೂ ಜೀವಂತವಿರಿಸಿವೆ. ಈ ತೆರನಾದ ಜೀವಂತಿಕೆಯಿಂದಲೇ ಕರ್ನಾಟಕದ ಈ ಬಹುರೂಪತ್ವಕ್ಕೆ ಗೌರವ ಪ್ರಾಪ್ತವಾಗಿದೆ. ಈ ಬದಲಾವಣೆಗಳ, ಭಿನ್ನತೆಗಳ ಒಟ್ಟಂದದಿಂದಲೇ ಕರ್ನಾಟಕತ್ವ ಅಥವಾ ಕನ್ನಡತ್ವ ಪ್ರಾಪ್ತವಾಗಿವೆ. ಈ ರೀತಿಯ ಅನನ್ಯತೆಗೆ ಕಾರಣವಾದ ಅಂಶಗಳನ್ನು ಸ್ಥೂಲವಾಗಿ ಗುರುತಿಸಿ ಅವುಗಳ ಬಹುರೂಪಗಳನ್ನು ಚರ್ಚೆಗೊಡ್ಡುವ ಹಾಗೂ ಮರುವಿವೇಚನೆಗೊಳಪಡಿಸಿ ಮಥಿಸುವ ಮೂಲಕ ಬರಬಹುದಾದ ಅಮೃತವನ್ನಾಗಲೀ ಹಾಲಾಹಲವನ್ನೇ ಆಗಲೀ ಮತ್ತೊಮ್ಮೆ ನಿಕಷಕ್ಕೊಡ್ಡುವ ಪ್ರಯತ್ನವಿದು.

ಅದಕ್ಕಾಗಿ ಈ ಪ್ರಧಾನ ಪರಿಕಲ್ಪನೆ ಮತ್ತು ಪೂರಕ ವಿಚಾರಗಳ ಮೇಲೆಯೇ ಮೂರು ದಿನಗಳ ಕಾಲ ಚಿಂತನ-ಮಂಥನ, ಪ್ರದರ್ಶನ-ಪ್ರಸರಣಗಳು ನಡೆಯಲಿವೆ. ಆ ಮೂಲಕ ಸಮಾಜದ ಹಲವು ಮಜಲುಗಳನ್ನು ಸ್ಪರ್ಶಿಸಲು ಪ್ರಯತ್ನಿಸಲಾಗುವುದು. ಸಾಹಿತ್ಯಾತ್ಮಕ ವಿಚಾರಗಳನ್ನು ಮೀರಿ ಕರ್ನಾಟಕ ದರ್ಶನಗಳ ಬಹುರೂಪತ್ವದ ಆಮೂಲಾಗ್ರ ಪರಿಚಯವನ್ನು ಈ ಸಮ್ಮೇಳನ ಮಾಡಬೇಕೆಂಬುದು ನಮ್ಮ ಆಸೆ. ಪರಿಣಾಮವಾಗಿ ಆಳ್ವಾಸ್ ನುಡಿಸಿರಿ ೨೦೧೮ರ ಸಮ್ಮೇಳನವು ವ್ಯಾಪಕವೂ, ವಿಶಿಷ್ಟವೂ ಆಗಿರುತ್ತದೆ ಎಂದು ಹೇಳಲು ಸಂತೋಷವೆನಿಸುತ್ತದೆ.

ಕನ್ನಡದ ಖ್ಯಾತ ಸಾಹಿತಿ, ಪ್ರಾಧ್ಯಾಪಕಿ, ಸ್ತ್ರೀನಿಷ್ಠ ವಿಮರ್ಶಕಿ, ಸಂಶೋಧಕಿ, ಸಂಪಾದಕಿ ಹೀಗೆ ಬಹುಮುಖ ಪ್ರತಿಭೆಯ ಡಾ. ಮಲ್ಲಿಕಾ ಎಸ್. ಘಂಟಿಯವರು ಆಳ್ವಾಸ್ ನುಡಿಸಿರಿ ೨೦೧೮ರ ಸರ್ವಾಧ್ಯಕ್ಷರು. ಸಮರ್ಥ ಆಡಳಿತಗಾರರಾಗಿಯೂ ಸಂಘಟಕರಾಗಿಯೂ ಕನ್ನಡಪರ ಹೋರಾಟಗಾರರಾಗಿಯೂ ಖ್ಯಾತರಾದ ಮಲ್ಲಿಕಾ ಎಸ್. ಘಂಟಿಯವರ ಸರ್ವಾಧ್ಯಕ್ಷ ಭಾಷಣದ ಅಕ್ಷರ ರೂಪವಾಗಿ ಈ ಪುಟ್ಟ ಕೃತಿ ಮೈದಾಳುತ್ತಿದೆ. ಅವರ ಸರ್ವಾಧ್ಯಕ್ಷ ಭಾಷಣದ ಪಾಂಡಿತ್ಯಪೂರ್ಣ ನುಡಿಗಳು ಆರೋಗ್ಯಪೂರ್ಣ ವಾಗ್ವಾದಗಳನ್ನು ಹುಟ್ಟುಹಾಕಲಿ ಎಂಬುದು ನಮ್ಮ ಆಸೆ.

'ಕರ್ನಾಟಕ ದರ್ಶನ : ಬಹುರೂಪಿ ಆಯಾಮಗಳು' ಎಂಬ ವಿಚಾರದಲ್ಲಿ ಡಾ. ಮಲ್ಲಿಕಾ ಎಸ್. ಘಂಟಿ ಅವರ ಚಿಂತನೆಯ ಅಕ್ಷರ ರೂಪವನ್ನು ನಿಮ್ಮ ಕೈಗಿಡುತ್ತಿದ್ದೇವೆ.

ಡಾ| ಎಂ. ಮೋಹನ ಆಳ್ವ

ಮೂಡುಬಿದಿರೆ
೧೬ ನವಂಬರ ೨೦೧೮

ಡಾ. ಮಲ್ಲಿಕಾ. ಎಸ್. ಘಂಟಿ
ಕುಲಪತಿ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಂಬರ್ ೧೬-೧೮

ಕರ್ನಾಟಕ ದರ್ಶನ : ಬಹುರೂಪಿ ಆಯಾಮಗಳು

ಆಳ್ವಾಸ್ ನುಡಿಸಿರಿ ೨೦೧೮ರ ಸಮ್ಮೇಳನದ ಸಂಘಟಕರಾದ ಡಾ. ಎಂ. ಮೋಹನ ಆಳ್ವ ಅವರೇ, ಮತ್ತು ಅವರ ಸದಾ ಬೆನ್ನಿಗಿರುವ ಸ್ವಾಗತ ಸಮಿತಿಯ ಸದಸ್ಯರೇ, ಉದ್ಘಾಟಕರಾದ ನಾಡಿನ ಹಿರಿಯ ಸಂಶೋಧಕರಾದ ಪ್ರೊ. ಷ. ಶೆಟ್ಟರ್ ಅವರೇ, ಅತ್ಯಂತ ಪ್ರೀತಿಯಿಂದ ನೋಡಲು ಕೇಳಲು ಬಂದಂತಹ ಕನ್ನಡದ ಸೃಜನಶೀಲ ಮನಸ್ಸುಗಳೇ, ಬರದೇ ಇದ್ದರೂ, ದೂರದಿಂದಲೇ ಕುತೂಹಲದಿಂದ ನನ್ನ ಮಾತುಗಳನ್ನು ಕೇಳುತ್ತಿರುವ ಸಹೃದಯ ಬಂಧುಗಳೇ, ಮಾಧ್ಯಮದ ಮಿತ್ರರೇ, ನಿಮಗೆಲ್ಲರಿಗೂ ನನ್ನ ನಮಸ್ಕಾರಗಳು.

ಈ ಬಾರಿಯ 'ನುಡಿಸಿರಿ'ಯ ವಿಶೇಷತೆಯೆಂದರೆ ನನ್ನ ಆಯ್ಕೆಯಲ್ಲ, ನನ್ನ ಒಪ್ಪಿಗೆ. ನಾನು ಇಲ್ಲಿ ನಿಂತು ಮಾತನಾಡುತ್ತಿರುವುದಕ್ಕೆ ಇರುವ ವಿರೋಧ. ಈ ವಿರೋಧ ಯಾಕೆ? ಎಂದು ನಾನು ಪ್ರಶ್ನಿಸುವುದಿಲ್ಲ.

ಅವರೆಲ್ಲರೂ ನನ್ನ ಸಂಗಾತಿಗಳೇ. ಅವರ ಆತಂಕ ನನಗೆ ಅರ್ಥವಾಗುತ್ತದೆ. ಆದರೆ ಯಾವ ರಾಜಿಯನ್ನು ಬಯಸದೇ ಸ್ವತಂತ್ರವಾಗಿ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಅವಕಾಶ ಇಲ್ಲಿರುವುದರಿಂದಲೇ ನಾನು ಇದನ್ನು ಒಪ್ಪಿಕೊಂಡದ್ದು, ನಾನು ಚಳುವಳಿ-ಸಂಘಟನೆಯಿಂದ ಎಂದೂ ದೂರ ಸರಿದವಳಲ್ಲ. ಅದನ್ನು ನನ್ನ ನೈತಿಕತೆಗೆ ಸದಾ ಪೂರಕವಾಗಿಯೇ ಬಳಸಿಕೊಂಡಿದ್ದೇನೆ. ಸಂಘಟನೆಯನ್ನು ಎಂದಿಗೂ ನನ್ನ ವೈಯಕ್ತಿಕತೆಗೆ ಬಳಸಿಕೊಂಡಿಲ್ಲ. ಅದು ನನ್ನನ್ನು ಬೆಳೆಸುತ್ತಲೇ, ಸ್ವತಂತ್ರವಾದ ವ್ಯಕ್ತಿತ್ವವನ್ನು ನನಗೆ ಕೊಟ್ಟಿದೆ. ಆ ವ್ಯಕ್ತಿತ್ವವೇ ನನ್ನನ್ನು ಇಲ್ಲಿಗೆ ಕರೆದು ತಂದಿರುವುದು. ಇದನ್ನು ಗಮನದಲ್ಲಿಟ್ಟುಕೊಂಡೇ ನನ್ನ ಹೆಜ್ಜೆಗಳನ್ನು ಇಡುತ್ತಿದ್ದೇನೆ. ಈ ಹೆಜ್ಜೆಗಳು ಪ್ರಾಮಾಣಿಕವಾದವುಗಳೆಂದು ನಾನು ನಂಬಿದ್ದೇನೆ.

ಇಂದು ಎಲ್ಲೆಲ್ಲೂ 'ಬಹುತ್ವ'ದ ಬಗ್ಗೆ ಅಥವಾ 'ಬಹುರೂಪಿ'ಯ ಬಗ್ಗೆ ಚರ್ಚೆಯಾಗುತ್ತಿದೆ. ಯಾಕೆ ಅದನ್ನು ಮತ್ತೆ ಮತ್ತೆ ಮುನ್ನೆಲೆಗೆ ತರುತ್ತಿದ್ದೇವೆ. ಅದು ತರಬಹುದಾದ "ಸಮಸಮಾಜ"ದ ಸೌಂದರ್ಯ ಎಂತದ್ದು? ಎನ್ನುವ ಪ್ರಶ್ನೆಗಳು ನಿನ್ನೆ-ಮೊನ್ನೆಯವುಗಳಲ್ಲ. ನಾಳೆಯ ಪ್ರಶ್ನೆಗಳೂ ಹೌದು! ಮನುಷ್ಯ ಸ್ವಕೇಂದ್ರಿತವಾದಂತೆ ಹುಟ್ಟಿಕೊಂಡ ಈ ಮನೋಧರ್ಮ ಅಷ್ಟು ಸುಲಭವಾಗಿ ಅಳಿಸುವಂತಹದ್ದಲ್ಲ; ಕಾನೂನಿನಿಂದಂತೂ ಅಳಿಸುವುದು ಸಾಧ್ಯವಿಲ್ಲ. ಹಾಗಂತ ಕಾನೂನಿನ ಅಸ್ತಿತ್ವದ ಬಗ್ಗೆ ನಾನು ತಕರಾರು ಮಾಡುತ್ತಿಲ್ಲ. ಅದರಾಚೆಯೂ ಶಾಶ್ವತ ಪರಿಹಾರವಿದೆ ಎಂದು ನಂಬಿದವಳು ನಾನು. ಇಂತಹ ಪ್ರಯತ್ನವನ್ನು ಬುದ್ಧ, ಮಹಾವೀರ, ಬಸವಣ್ಣ, ಗಾಂಧೀ, ಅಂಬೇಡ್ಕರ್, ವಿವೇಕಾನಂದ-ಪರಮಹಂಸರಂತಹವರು ಮಾಡಿದರು. ಆದರೂ ಈ ಪ್ರಯತ್ನಕ್ಕೆ ಕೊನೆ ಇಲ್ಲ.

ಬುದ್ಧ ಗುರು ಹೇಳುವಂತೆ ಜಗತ್ತಿನಲ್ಲಿ ಸ್ಥೂಲ-ಸೂಕ್ಷ್ಮ ವಸ್ತುಗಳನ್ನೊಳಗೊಂಡಂತೆ ಎಲ್ಲರ/ಎಲ್ಲವೂ ನಾಶವಾಗುತ್ತವೆ. ಹೀಗಾಗಿ ಇಲ್ಲಿ ಯಾವುದೂ ಶಾಶ್ವತವಲ್ಲ. ಕ್ಷಣ ಕ್ಷಣಕ್ಕೂ ಪ್ರತಿಯೊಂದು ಕಣ ಕಣವೂ ಅಮೂಲಾಗ್ರವಾದ ಬದಲಾವಣೆಗಳನ್ನು ಹೊಂದುತ್ತಲೇ ಇರುತ್ತದೆ. ಇದನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಸುಲಭವಲ್ಲವಾದರೂ, ಅರ್ಥೈಸುವ ಪ್ರಯತ್ನಗಳು ನಿಂತಿಲ್ಲ. ಬುದ್ಧನ ದರ್ಶನಸಾರ

ವಾದ ಈ ಮಾತುಗಳನ್ನು ನಾವು ಸದಾ ನೆನಪಿಸಿಕೊಳ್ಳಬೇಕಾಗಿದೆ. ಬುದ್ಧ ತೋರಿದ ದಾರಿ ಎಂತದ್ದು ಎಂದರೆ "ಬೆಳಕನ್ನು ಕುರಿತು ಚರ್ಚೆ ನಡೆಸುವುದರಿಂದ ಏನು ಲಾಭ? ಬೆಳಕನ್ನು ಕಾಪಾಡಿಕೊಳ್ಳುವುದು ಮುಖ್ಯ" ಎನ್ನುವ ದಾರಿ. ಆ ದಾರಿಯಲ್ಲಿಯೇ ನಾವು ಭಾರತವನ್ನು ಕರ್ನಾಟಕವನ್ನು ದರ್ಶಿಸಬೇಕಾಗಿದೆ. 'ದರ್ಶನ' ಎನ್ನುವ ಪದವೇ ಏಕರೂಪಿಯಾದುದ್ದಲ್ಲ, ಬಹುರೂಪಿಯಾದದ್ದು. ಬಹುರೂಪಿಗೆ ಇರುವ ಅಂತಃಶಕ್ತಿ, ಏಕರೂಪತ್ವಕ್ಕೆ ಇರಲು ಸಾಧ್ಯವಿಲ್ಲ. ಏಕರೂಪಕ್ಕೆ ಒಳಗಾದ ಧರ್ಮಗಳಿಗೂ ಇದು ಅನ್ವಯಿಸುವ ಮಾತಿದು. ಭಾಷೆಯನ್ನು, ಧರ್ಮವನ್ನು, ಮನುಷ್ಯನನ್ನು 'ಏಕರೂಪಿ'ಯಾಗಿ ಕಲ್ಪಿಸಿಕೊಳ್ಳುವುದೇ ವಿಚಿತ್ರವಾಗಿದೆ. ಇದೊಂದು ಅನಾರೋಗ್ಯಕರ ಬೆಳವಣಿಗೆಯಾಗಿದೆ. ಈ ದೃಷ್ಟಿಯಿಂದ ನುಡಿಸಿರಿ ಯೋಚಿಸಿದ ಪರಿಕಲ್ಪನೆ ಪ್ರಸ್ತುತ ಬಿಕ್ಕಟ್ಟುಗಳಿಗೆ ಉತ್ತರ ರೂಪದಲ್ಲಿದೆ. ಈ ಹಿನ್ನೆಲೆಯಲ್ಲಿಯೇ ಕರ್ನಾಟಕ ದರ್ಶನವನ್ನು ಸಾಹಿತ್ಯ ಪರಂಪರೆ, ಆಧ್ಯಾತ್ಮ ಪರಂಪರೆ, ಜಾನಪದ ಪರಂಪರೆ, ಬಹುಭಾಷಾ ಪರಂಪರೆಯ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಮಾಡಲಾಗುತ್ತಿದೆ. ಇವುಗಳ ಮೂಲಕ ಭವಿಷ್ಯದ ಕರ್ನಾಟಕವನ್ನೂ ನಾವು ಕಟ್ಟಿದಂತಾಗುತ್ತದೆ. ಚರಿತ್ರೆಯ ಜೊತೆ ಜೊತೆಗೆ ವರ್ತಮಾನವನ್ನು, ಭವಿಷ್ಯವನ್ನು ರೂಪಿಸುವ ಜವಾಬ್ದಾರಿ ನಮ್ಮ ಮೇಲಿದೆ. ಇದನ್ನು ಅರಿತು ನಮ್ಮ ಸೃಜನಶೀಲತೆಯನ್ನು, ಸಾಮಾಜಿಕತೆಯನ್ನು, ಧಾರ್ಮಿಕ ಪರಿಸರವನ್ನು, ರಾಜಕೀಯ ಸಿದ್ಧಾಂತಗಳನ್ನು ಭಾಷಾ ವೈವಿಧ್ಯತೆಯನ್ನು ರೂಢಿಸಿಕೊಳ್ಳಬೇಕಾಗಿದೆ. ಅಂತಹ ಪ್ರಯತ್ನಗಳಿಗೆ, ಕನಸುಗಳಿಗೆ ಸುದೀರ್ಘವಾದ ಚರಿತ್ರೆ ಇದೆ. ಅಂತಹ ಚರಿತ್ರೆಯನ್ನು ವರ್ತಮಾನದಲ್ಲಿ ಅನುಸಂಧಾನ ಮಾಡುವ ಪ್ರಯತ್ನವನ್ನು ಇಚ್ಛಾಶಕ್ತಿಯ ನೆಲೆಯಲ್ಲಿ ನಾವು ಮಾಡಬೇಕಾಗಿದೆ.

'ದರ್ಶನ' ಎನ್ನುವುದು ಸಿದ್ಧ ಮಾದರಿಯದ್ದಲ್ಲ. ಅದು ಪ್ರಯತ್ನದ ಮೂಲಕವೇ ಸಾಧಿಸಿದಂತಹದ್ದು. ಆ ಪ್ರಯತ್ನದ ಹಿಂದೆ ಇದ್ದ ಕನಸು 'ಸಮಾನತೆ' ಎನ್ನುವಂತದ್ದು. ಅದು ಬುದ್ಧ ಬಸವಾದಿ ಶರಣ ಶರಣೆಯರು, ದಾಸರು, ತತ್ವಪದಕಾರರು ಕಂಡ ದರ್ಶನದ್ದು. ಅಂತಹ 'ಸಮಾನತೆ'ಯ ಬೀಜಗಳನ್ನು ನಮ್ಮ ಸಾಹಿತ್ಯ, ಆಧ್ಯಾತ್ಮಿಕ, ಜಾನಪದ ಪರಂಪರೆ, ಭಾಷೆಯ ವೈವಿಧ್ಯಮಯತೆಯಿಂದ ಗುರುತಿಸಬಹುದಾಗಿದೆ. ಇದಕ್ಕೆ ಪೂರಕವಾಗಿ

ನಾನು ಇಬ್ಬರ ಹೇಳಿಕೆಗಳನ್ನು ಉಲ್ಲೇಖಿಸಲು ಬಯಸುತ್ತೇನೆ. ಒಂದು ಕೋಟಾದ ಶಿವರಾಮ ಕಾರಂತರದು, ಮತ್ತೊಂದು ಕುದ್ಮಲ್ ರಂಗರಾವ್ ಅವರದ್ದು.

ಇದೇ ನೆಲದ ಕಾರಂತರು ಹೇಳುವಂತೆ "ನಾವು ನಮ್ಮ ಜಗತ್ತನ್ನು ಎಷ್ಟು ದೊಡ್ಡದಾಗಿ ಮಾಡಿಕೊಳ್ಳುತ್ತೇವೋ ಅಷ್ಟು ಹೆಚ್ಚಿನ ಪ್ರಯೋಜನವು ಬಂದೀತು. ಈ ಜಗತ್ತಿನಲ್ಲಿ ನಾವು ಎಲ್ಲರಿಗೂ, ಎಲ್ಲವಕ್ಕೂ ಸ್ಥಾನವನ್ನು ಕೊಡಬೇಕಾಗುತ್ತದೆ. ಅದರಲ್ಲಿ ಕೇವಲ ಭಾರತೀಯರಿಗೆ ಮಾತ್ರವಲ್ಲ, ನಮ್ಮ ನಮ್ಮ ಜಾತಿಯವರಿಗೆ ಮಾತ್ರವಲ್ಲ, ಮನುಷ್ಯರಿಗೂ ಮಾತ್ರವಲ್ಲ, ಮನುಷ್ಯನಿಗಿಂತ ಎಷ್ಟೋ ಎಷ್ಟೋ ಮೊದಲು ಹುಟ್ಟಿದ ಒಂದು ಅಣುಜೀವಿಗೂ ಸ್ಥಾನವನ್ನು ಕೊಡಬೇಕಾಗುತ್ತದೆ." ಈ ಉದಾತ್ತತೆಯನ್ನು ಮರೆತ ನಮ್ಮ 'ಅಹಂ'ಮಿಕೆಗೆ ಬಲಿಯಾದ ಅನೇಕ ಜೀವಿಗಳನ್ನು ಪುನಃ ಹುಟ್ಟಿಸಲು ಸಾಧ್ಯವೇ? ನಾವು ಹೊರಟಿರುವ 'ಏಕರೂಪಿ'ಯ ತಾತ್ವಿಕತೆಯೇ ಇಂತಹ ಅನಾಹುತಗಳಿಗೆ ಬಹುಮುಖ್ಯ ಕಾರಣವಾಗಿದೆ. ನಿಸರ್ಗದ ನಿಯಮಗಳನ್ನು ಧಿಕ್ಕರಿಸಿ, 'ಸ್ವಕೇಂದ್ರಿತ' ಶಕ್ತಿಗಳನ್ನು ಸ್ಥಾಪಿಸುವ ಉದ್ದೇಶವೇ ಇದೆಲ್ಲದಕ್ಕೂ ಕಾರಣವಾಗಿದೆ. ಈ ಕಾರಣದಿಂದಲೇ ಈ ನೆಲದಲ್ಲಿ ಇಂದು 'ಬಹುತ್ವ' ನೆಲೆಗಳು ಕಾಣಿಸಿಕೊಳ್ಳುತ್ತಿಲ್ಲ. 'ಏಕತ್ವ'ದ ಆಕ್ರಮಣಶೀಲ ಪ್ರವೃತ್ತಿ ಒಂದು ಸಮಾಜದ ಅಸ್ತಿತ್ವವನ್ನೇ ಪ್ರಶ್ನಿಸುತ್ತಿರುವುದು, ಅದನ್ನು ನಾಶ ಮಾಡಲು ಹೊರಟಿರುವುದು ಕಾರಂತರ ಆಶಯಗಳಿಗೆ ವಿರುದ್ಧವಾದುದು. ಈ ನೆಲದಲ್ಲಿ ಮತ್ತೊಂದು ಅಂತಹದ್ದೇ ಧ್ವನಿ ಕೇಳಿಬಂದಿದೆ. ದಕ್ಷಿಣ ಕನ್ನಡದ ಕುದ್ಮಲ್ ರಂಗರಾವ್‌ರವರು ಒಬ್ಬ ಬ್ರಾಹ್ಮಣರು. ಅವರನ್ನು ಬ್ರಾಹ್ಮಣರೆಂದು ಕರೆಯುವುದೆ ತಪ್ಪು, ಆದಾಗ್ಯೂ ಸಂದರ್ಭವನ್ನು ಮುಖ್ಯವಾಗಿಟ್ಟುಕೊಂಡು ಹೀಗೆ ಕರೆಯಬೇಕಾಗಿದೆ. ಇವರು ತಮ್ಮ ಇಡೀ ಸಂಪತ್ತನ್ನು ತಿರುಪತಿಗೋ, ಉಡುಪಿಗೋ, ಧರ್ಮಸ್ಥಳಕ್ಕೋ, ಗೋಕರ್ಣಕ್ಕೋ, ಶೃಂಗೇರಿಗೋ ಕೊಡಬಹುದಾಗಿತ್ತು. ಆದರೆ ಆ ನಿರ್ಧಾರವನ್ನು ತೆಗೆದುಕೊಳ್ಳಲು ಇಚ್ಛಿಸದೇ ದಲಿತರ ಶಿಕ್ಷಣಕ್ಕಾಗಿ ತಮ್ಮ ಅಪಾರ ಸಂಪತ್ತನ್ನು ವ್ಯಯ ಮಾಡಿದ್ದಲ್ಲದೆ ಆ ಕುರಿತು ಅವರು ಹೇಳಿದ ಮಾತು ಈ ಭಾಗದ ಬಹುತ್ವದ ಬಹುಮುಖ್ಯ ಆಯಾಮವೆಂದೇ ನಾನು ಭಾವಿಸಿದ್ದೇನೆ. ಕುದ್ಮಲ್

ರಂಗರಾವ್ ಅವರು ಎಂತಹ ಸಮಾನತೆಯ ಆಶಯವನ್ನು ಕಂಡಿದ್ದರೆಂದರೆ "ದಲಿತರು ವಿದ್ಯಾವಂತರಾಗಿ ಅವರು ಕಾರಿನಲ್ಲಿ ಹೋಗುವುದನ್ನು ನಾನು ನೋಡಬೇಕು. ಹಾಗೆ ನೋಡುವಾಗ ಆ ಕಾರಿನ ಚಕ್ರದ ಧೂಳು ನನ್ನ ಕಣ್ಣುಗಳಲ್ಲಿ ಬೀಳಬೇಕು. ಹಾಗೆ ಬಿದ್ದಾಗ ನನ್ನ ಪರಂಪರೆ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತವಾಗುತ್ತದೆ" ಎಂದು. ಈ ರೀತಿಯ ಕನಸುಗಳು, ಯೋಚನೆಗಳು ಈ ನೆಲವನ್ನು ಮಾನವೀಯಗೊಳಿಸಲು ಸಾಧ್ಯ. ಈ ಯೋಚನೆಗಳು ಇಲ್ಲದಿದ್ದಲ್ಲಿ ಇಲ್ಲಿ ಜಾರಿಯಾಗುವ ಕ್ರೌರ್ಯವೇ ಭಯಾನಕವಾಗಿರುತ್ತದೆ. ಇದರಿಂದಾಗಿ ಜೀವಿಸುವುದನ್ನು ಕಲಿಸಲು ಸಾಧ್ಯವಿಲ್ಲ. ಸಾಯುವುದನ್ನು ಕಲಿಸಲು ಸಾಧ್ಯ. ಆದರೆ ಅಂತಹ ಪ್ರಯತ್ನಕ್ಕೆ ನಮ್ಮ ಸಾಹಿತ್ಯ ತಡೆಯೊಡ್ಡುತ್ತಲೇ ಬಂದಿದೆ. ಅಂತಹ ಒಂದು ಸೂಚನೆಯನ್ನು ಕುವೆಂಪುರವರ 'ಹೋಗುವೆನು ನಾ' ಎಂಬ ಪದ್ಯ ಸೂಚಿಸುತ್ತದೆ. ಈ ಪದ್ಯ ಕುವೆಂಪು ಬಯಸುವ ಮಲೆನಾಡನ್ನು ಕುರಿತದ್ದಾದರೂ, ಅದನ್ನು ಸದ್ಯದ ನಾವು ಕಟ್ಟಬಯಸುವ ಕರ್ನಾಟಕಕ್ಕೆ ಹೋಲಿಸಬಹುದು. ೧೯೩೩ರಲ್ಲಿ ರಚಿತವಾದ ಈ ಪದ್ಯ ಈ ರೀತಿಯಾಗಿದೆ.

"ಇಲ್ಲಿ ಇಂತಿರಬೇಕು; ಇಂತಿರಬಾರದೆಂಬುದಿಲ್ಲವೈ;
ಅಲ್ಲಿ ಹೊರೆಹೊಣೆಯಿಲ್ಲ; ಶಾಸ್ತ್ರದ ವಿಧಿ ನಿಷೇಧಗಳಿಲ್ಲವೈ;
ಜಾತಿಗೀತಿಯ ವೇದಭೇದದ ಕಟ್ಟುಕಟ್ಟಳೆ ನಿಲ್ಲದೈ;
ಅಲ್ಲಿ ಪ್ರೀತಿಯೆ ನೀತಿ; ಧರ್ಮಕ್ಕೆ ಬೇರೆ ಭೀತಿಯೆ ಸಲ್ಲದೈ!

....

ನಗರ ನಾಗರೀಕತೆಯ ಗಲಿಬಿಲಿ ಅಲ್ಲಿ ಸೋಂಕದು ಸುಳಿಯದು
ದೇಶ ದೇಶದ ವೈರಯುದ್ಧದ ಸುದ್ದಿಯೊಂದೂ ಸುಳಿಯದು
'ತಿಳಿಯದಿರುವುದೇ ತಿಳಿವು' ಎಂಬುವ ನನ್ನಿ ಆಯೆಡೆ ತಿಳಿವುದು
ತಿಳಿಯೆ ನೋವಿರೆ, ತಿಳಿಯದಿರುವುದೆ ಜಾಣ್ಮೆ' ಎಂಬರಿವುಳಿವುದು॥

ಜಾತಿಗೀತಿಯ ವೇದಭೇದದ ಕಟ್ಟುಕಟ್ಟಳೆಗಳಿಲ್ಲದೆ ಪ್ರೀತಿಯನ್ನೇ ನೀತಿಯನ್ನಾಗಿಸಿ ಕೊಂಡ ಕವಿ ಕಲ್ಪನೆ ಎಷ್ಟು ಅದ್ಭುತವಾದದ್ದು. ಆದರೆ ಆ ಕಲ್ಪನೆಗೆ ವಿರುದ್ಧವಾದ ವಾಸ್ತವತೆ ನಮ್ಮ ಮುಂದಿದೆ. ಅದು ಹೇಗಿದೆಯೆಂದರೆ "ಹೋಲೋಗ್ರಾಮ್ ದೃಷ್ಟಿಕೋನ"ದಿಂದ ಕೂಡಿದೆ.

ಈ ದೃಷ್ಟಿಕೋನದ ವಿಧಾನವೆಂದರೆ "ಎಲ್ಲೆಲ್ಲೂ ಏಕ ಪ್ರಕಾರದ ನೇಯ್ಗೆ ಕಾಣುತ್ತದೆ. ಸಂಸ್ಕೃತಿಯೊಂದರ ಎಲ್ಲ ವ್ಯವಸ್ಥೆಗಳಲ್ಲಿ ನಿರಾಕರಣೆಗಳಿಲ್ಲದ, ವಕ್ರತೆಯಿಲ್ಲದ, ಸಾತತ್ಯ ಭಂಗವಿಲ್ಲದ, ಕಾಲದೇಶಗಳ ಭಿನ್ನ ಆವರಣವಿಲ್ಲದ ಒಂದೇ ಬಗೆಯ ರಚನೆ ಕಾಣುತ್ತದೆ. ಆತುರದಲ್ಲಿರುವವರಿಗೆ ಇದು ಬಹಳ ಆಕರ್ಷಕ ನೋಟ. ಈ ಬಗೆಯ ನೋಟವನ್ನು ಒಪ್ಪಿಕೊಂಡಿರು ವುದರಿಂದಲೇ ಭಾರತದ ನಾಗರೀಕತೆಯು ಮಹಾಕಾವ್ಯಗಳು, ಮಹಾಭಾರತ, ರಾಮಾಯಣ, ಪುರಾಣಗಳು, ಜಾನಪದ ಚಿಕ್ಕ ಅಥವಾ ಆಡುಮಾತಿನಲ್ಲಿ ಹೇಳುವ ಹಾಗೆ ಚಿಕ್ಕ ಚಿಕ್ಕಪರಂಪರೆಗಳು ಎಲ್ಲವೂ ಅಖಂಡ ವಾಗಿ ಒಂದೇ ಆಗಿ ತೋರುತ್ತವೆ. ಚಿಕ್ಕ ಪರಂಪರೆಗಳು ಸಾಮಾನ್ಯರಿಗೆ, ದೊಡ್ಡ ಪರಂಪರೆಗಳು ದೊಡ್ಡವರಿಗೆ"[೯] ಎನ್ನುವ ಎ.ಕೆ. ರಾಮಾನುಜನ್ ಅವರು ಭಾರತದ ಸಾಂಸ್ಕೃತಿಕ ಪರಂಪರೆಗಳನ್ನು ದೃಷ್ಟಿಕೋನವನ್ನಾಗಿಸಿಕೊಂಡು ಈ ಮಾತನ್ನು ಹೇಳುತ್ತಾರೆ. ಮುಂದುವರೆದು ಅವರ ಮಾತನ್ನೇ ಉಲ್ಲೇಖಿಸುವುದಾದರೆ "ಭಾರತದ ಸಾಂಸ್ಕೃತಿಕ ಪರಂಪರೆಗಳು ಎಂದೂ ಕರಗಿಸಿ ಒಂದಾಗಿಸಲಾಗದಂಥ ಬಹುವಚನದವು. ಅನೇಕ ಬಾರಿ ಒಂದರೊಡನೊಂದು ಘರ್ಷಿಸು ವಂಥವು. ಆದರೂ ಹಳೆಯ ರೂಪಗಳಿಂದ ಹೊಸ ರೂಪಗಳನ್ನು ನಿರಂತರವಾಗಿ ಉತ್ಪಾದಿಸುತ್ತಲೇ ಇರುವ ಕೊನೆ ಪಕ್ಷ ಅ) ಸಂದರ್ಭ ಸಂವೇದಿತ್ವ ಮತ್ತು ಆ) ಬಗೆಬಗೆಯ ಸಂವಾದಾತ್ಮಕ ಪ್ರತಿಫಲನ [ಡಯಲಾಜಿಕ್ ರಿಫ್ಲೆಕ್ಸಿವಿಟಿ] ಎಂಬ ತತ್ವಗಳಿಗೆ ಅನುಸಾರವಾಗಿ ವ್ಯವಸ್ಥೆಗೊಂಡಿರು ವಂಥವು.

ಬ್ರಾಹ್ಮಣ, ಶೂದ್ರ, ಬೌದ್ಧ, ಜೈನ, ತಂತ್ರ, ಬುಡಕಟ್ಟು ಜಾನಪದ ಪರಂಪರೆಗಳು ಮತ್ತು ಸ್ವತಃ ಆಧುನಿಕತೆ ಎನ್ನುವ ಪರಂಪರೆಗಳೆಲ್ಲವೂ ಈ ವ್ಯವಸ್ಥೆಯಲ್ಲಿ ಪ್ರಮುಖವಾಗಿವೆ. ಈ ಒಂದೊಂದು ಪರಂಪರೆಯೂ ತನ್ನ ಹಿಂದಿನ ಮತ್ತು ತನ್ನನ್ನು ಸುತ್ತುವರೆದಿರುವ ಪರಂಪರೆಗೆ ಸ್ಪಂದಿಸುತ್ತ ಅದನ್ನು ಪಲ್ಲಟಿಸುತ್ತ ಉರುಳಿಸುತ್ತ ಪರಿವರ್ತಿಸುತ್ತ ಇರುತ್ತದೆ. ನಾವು ಭಾರತದಲ್ಲಿ ಹೇಳುವ ತ್ರೀರಿಂಗ್ ಸರ್ಕಸ್ ಡೇರೆಗಳ ಥರ ಇವು : ದೂರದಿಂದ ನೋಡುವುದಕ್ಕೆ ಮಾತ್ರ ಒಂದೇ ಡೇರೆ. ಅದರೊಳಗೆ ಮೂರು ಬೇರೆ ಬೇರೆ ಕಸರತ್ತುಗಳ ಪ್ರದರ್ಶನ. ಅವು ಒಂದೊಂದರ

ನಡುವೆಯೂ ಬಗೆ ಬಗೆಯ ಸಂವಾದ ನಡೆದೇ ಇರುತ್ತದೆ."[3] ಈ ಮಾತುಗಳನ್ನು ಕರ್ನಾಟಕಕ್ಕೂ ಅನ್ವಯಿಸಬಹುದು. ಕರ್ನಾಟಕ ದರ್ಶನವಾಗಬೇಕಾದದ್ದು ಇದೇ ನೆಲೆಯಲ್ಲಿ ಎನ್ನುವುದು ನನ್ನ ಖಚಿತ ಅಭಿಪ್ರಾಯ. ಇದುವರೆಗೂ ನಾವು ಕನ್ನಡ ಸಾಹಿತ್ಯವನ್ನು ಶತಮಾನದ ಹಿನ್ನೆಲೆಯಲ್ಲಿ, ಕವಿಗಳ ಹಿನ್ನೆಲೆಯಲ್ಲಿ, ರೂಪಗಳ ಹಿನ್ನೆಲೆಯಲ್ಲಿ ಚರ್ಚಿಸಿದ್ದೇವೆ. ಆದರೆ ಒಂದು ಸಾಹಿತ್ಯವನ್ನು ನಿರ್ಧರಿಸುವ, ಪ್ರಭಾವಿಸುವ ಅಂಶಗಳ ಕಡೆ ನಾವು ಗಮನಕೊಟ್ಟಿಲ್ಲ. ಅದನ್ನು ನೋಡಿದ್ದರೂ ಧರ್ಮದ ಹಿನ್ನೆಲೆಯಿಂದ ಮಾತ್ರ ನೋಡಿದ್ದೇವೆ. ಅಂದರೆ ಇತರ ಅಂಶಗಳಾದ ಕೃಷಿ, ಪ್ರಭುತ್ವಗಳ ನಿರ್ಮಾಣ, ಜನವಸತಿ, ಶಿಕ್ಷಣ, ಆರ್ಥಿಕತೆಯ ಚಿಕ್ಕಟ್ಟುಗಳು, ಜಾತಿವ್ಯವಸ್ಥೆ, ಲಿಂಗಾಧಾರಿತ ತಾರತಮ್ಯಗಳನ್ನು ಗಮನಿಸಿಲ್ಲ. ಇದುವರೆಗೂ ನಾವು ಈ ನೆಲೆಗಳನ್ನು ಅಲಕ್ಷ್ಯಕ್ಕೆ ಒಳಗು ಮಾಡಿದ್ದೇವೆ. ಇದರಿಂದಾಗಿ ಕರ್ನಾಟಕದ ಬಹುತ್ವವನ್ನು ಬರೀ ಧಾರ್ಮಿಕತೆಯ ಹಿನ್ನೆಲೆಯಿಂದ ನಿರ್ವಚಿಸುವುದಲ್ಲ. ಅದರಾಚೆ ಇರುವ ಮನುಷ್ಯ ವಿರೋಧಿ ನೆಲೆಗಳನ್ನು ಮುನ್ನಲೆಗೆ ತಂದಾಗ, ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತೆ. ಯಾಕೆಂದರೆ 'ಏಕರೂಪತ್ವ' ಕಲ್ಪನೆ ಪ್ರಭುತ್ವಕ್ಕೆ ಪೂರಕವಾದದ್ದು. ಅದೇ 'ಬಹುತ್ವ' ಜನರಿಗೆ ಪೂರಕವಾದದ್ದು. ಪ್ರಭುತ್ವಕ್ಕೆ Tool ಆದ ಏಕತ್ವವನ್ನು ವೈಭವೀಕರಿಸುವುದರಿಂದ ನಮ್ಮನ್ನು ನಾವೇ ಅನ್ಯರನ್ನಾಗಿಸಿ ಕೊಂಡಂತಾಗುತ್ತೆ. ಇದನ್ನು ಕನ್ನಡ ಸಾಹಿತ್ಯ ಬಹಳ ಸೂಕ್ಷ್ಮವಾಗಿ ಎದುರಿಸಿದೆ. ಒಳಗಿನ ಯಜಮಾನ್ಯವನ್ನು ಮತ್ತು ಹೊರಗಿನ ಯಾಜಮಾನ್ಯವನ್ನು ಪ್ರಶ್ನಿಸುತ್ತಲೇ ತನ್ನನ್ನು ತಾನು ವಿಸ್ತರಿಸಿಕೊಂಡಿದೆ. ಇಲ್ಲದಿದ್ದರೆ ತನ್ನ ಆಶ್ರಯದಾತನಾದಂತಹ ಅರಿಕೇಸರಿಯನ್ನು ಬಿಟ್ಟು ಭಾರತವಿದೆ ಎಂದು 'ಪಂಪ' ಹೇಳುತ್ತಿರಲಿಲ್ಲ. ಆತ ಹೇಳಲು ಹೊರಟಿರುವುದು ಅರ್ಜುನನ ವಿಕ್ರಮಗಳನ್ನೇ ಹೊರತು ಕರ್ಣನ ತ್ಯಾಗಗಳನ್ನಲ್ಲ. ಆದರೆ ಅಲ್ಲಿ ಪಂಪ ಹೇಳಿದ್ದೇ ಕರ್ಣನ ತ್ಯಾಗಗಳನ್ನ, ಆತನ ಶೌರ್ಯವನ್ನು, ಆತನ ಹಿರಿತನವನ್ನು ಅಂತಹ ಪ್ರತಿನಾಯಕನ ಕಲ್ಪನೆ ಮಾಡಿದ್ದೇ ಬಹುತ್ವದ ನೆಲೆಯಲ್ಲಿ. ಪಂಪನ ಕರ್ಣ, ರನ್ನನ ಸುಯೋಧನ, ನಾಗಚಂದ್ರನ ರಾವಣ, ಕುವೆಂಪುವಿನ 'ಮಂಥರೆ', ಅನಂತಮೂರ್ತಿಯ ಜಗನ್ನಾಥ ಮೂಡಿಬಂದದ್ದೇ ಹಾಗೆ! ಇವುಗಳನ್ನು

ಆಹ್ವಾನಿಸುವುದೇ ಬಹುತ್ವ ಅಥವಾ ಪರ್ಯಾಯ ಪರಂಪರೆಗಳಾಗಿವೆ. ಇವುಗಳನ್ನು ಆಹ್ವಾನಿಸಿಕೊಳ್ಳದಿರುವುದರಿಂದಲೇ, ರಾಷ್ಟ್ರೀಯತೆ, ಧರ್ಮ, ಮೈಬಣ್ಣ, ಆಹಾರ ಪದ್ಧತಿ, ಮಹಿಳೆ, ಪ್ರಾದೇಶಿಕತೆ, ಸಂಸ್ಕೃತಿ, ಕೋಮುಭಾವನೆಗಳು ಆಧುನಿಕ ವಿಭಜನೆಗಳಾಗಿಯೇ ಕಾಣಿಸಿಕೊಳ್ಳುತ್ತಿವೆ. 'ಏಕರೂಪಿ' ಸಂಗತಿಗಳು ಕೇಂದ್ರಸ್ಥಾನದಲ್ಲಿದ್ದರೇ, 'ಬಹುರೂಪಿ' ನೆಲೆಗಳು ಇಂದು ಅಂಚಿಗೆ ತಳ್ಳಲ್ಪಟ್ಟಿವೆ. ಹೀಗಾಗಿ ಗುಡಿ, ಕಾಡುದಾರಿ, ಕಾಡು, ಬಾಲ್ಯ, ಸಾಂಸ್ಕೃತಿಕತೆ, ಇತ್ಯಾದಿ ಸಂಗತಿಗಳೆಲ್ಲ ಅಪವಿತ್ರವಾಗಿ, ದೇವಸ್ಥಾನ, ಉದ್ಯಾನವನ, ರಸ್ತೆ ನಿರ್ಮಾಣ, ಯೌವ್ವನ, ಸಂಸ್ಕೃತಿಗಳು ಪವಿತ್ರವಾಗಿವೆ'. ಇದನ್ನು ಡಾ. ಚಂದ್ರಶೇಖರ ಕಂಬಾರರ ಒಂದು ಪದ್ಯ ಅತ್ಯಂತ ಮಾರ್ಮಿಕವಾಗಿ ವಿವರಿಸುತ್ತದೆ.

"ನೀರು ಬಳಸುವುದಕ್ಕೆ ಕುಡಿಯುವುದಕ್ಕೆ ಮೀಯಲಿಕ್ಕೆ ದನದ
ಸೆಗಣಿ ಮೈಗಂಜಳ ತೊಳೆಯಲಿಕ್ಕೆ ನಮ್ಮಪ್ಪ ಬೀರಪ್ಪನ ಪಾದ
ಪಡಕೊಳ್ಳಲಿಕ್ಕೆ, ಹಡದವ್ವ ಕರ್ರೆವ್ವನ ಕರಿಮೈ ಎರೆಯಲಿಕ್ಕೆ
ಹೊರಗಡೆಗೆ, ಹೇಲುಚ್ಚೆಗೆ, ಬೋಳಿಯರ ಮಡಿಬಟ್ಟೆಗೆ,
ಭಟ್ಟರಾಚಮನಕ್ಕೆ, ಅದಕ್ಕೆ ಇದಕ್ಕೆ ಎದಕ್ಕು
ಒಟ್ಟು ಖರ್ಚಾದ ಕೆರೆ ನೀರು ಬಚ್ಚಲದಿಳಿಜಾರಿಗುಂಟ ಹರಿದು
ಕೆರೆಗೆ ಸೇರುವ ದಿನನಿತ್ಯದ ವ್ಯವಹಾರ ಈ ಕೆರೆಯ ಚಮತ್ಕಾರ'

(ಗಂಗೆ)

'ನೀರು' ಇಷ್ಟೆಲ್ಲಾ ಬಳಕೆಗೆ ಕಾರಣವಾದಾಗ ಅದು ಬರೀ ತೀರ್ಥವೆಂದಷ್ಟೇ ಎಂದು ಹೇಳುವುದು ಹೇಗೆ? ಅದರ ವಿವಿಧ ಸಾಧ್ಯತೆಗಳನ್ನು ತಳ್ಳಿಹಾಕುವ ರೀತಿಯೇ 'ಬಹುರೂಪಿ' ನೆಲೆಗೆ ಕಾರಣವಾಗಿದೆ. ಅದಕ್ಕೆಂದೇ 'ಅಲ್ಲಮ' ಹೇಳಿದ್ದು

"ಜಗದ ಮೇಲುಳ್ಳ ಅರು ಹಿರಿಯರೆಲ್ಲರೂ
ಮರುಳುಗೊಂಡಾಡುತ್ತಿದ್ದಾರೆ ನೋಡಾ!
ಮಂಜಿನ ಮಡಕೆಯೊಳಗೆ
ರಂಜನೆಯ ಭಂಡವ ತುಂಬಿ
ಅಂಜದೆ ಪಾಕವ ಮಾಡಿಕೊಂಡು ಉಂಡು

ಎಂಜಲು ಮಾಡುತ್ತಿಪ್ಪರು ನೋಡಾ!
ಸಂಜೀವಿನಿಯ ಬೇರ ಕಾಣದೆ
ಮರಣಕ್ಕೊಳಗಾದರು
ಗುಹೇಶ್ವರನನು ಅರಿಯದ ಭವಭಾರಿಗಳೆಲ್ಲರೂ!

ಗುಹೇಶ್ವರನ ಭಕ್ತರು ಬಹುರೂಪಿಗಳು. ವಿಕಾರಿಗಳು ಸಂಜೀವಿನಿಯ ಬೇರೆ ಕಾಣದೆ ಮರಣಕ್ಕೊಳಗಾದವರು. ಇದನ್ನು ಅಲ್ಲಮ ಬೆಡಗಿನ ರೂಪದಲ್ಲಿ ಹೇಳುತ್ತಿದ್ದಾನೆ. ಅಲ್ಲಮ ನಮ್ಮ ಸ್ಮೃತಿಲೋಕದ ಸಂಕೇತ. ಆ ಸ್ಮೃತಿಗಳೆಲ್ಲವೂ ಭೂತವೂ ಹೌದು, ಭವಿಷ್ಯವೂ ಹೌದು! ಇಂತಹ ಬಹುರೂಪಿಯ ನೆಲೆಯಲ್ಲಿಯೇ ವಚನ ಸಾಹಿತ್ಯ ನಿಂತಿರುವುದು. ಶ್ರೇಷ್ಠ ಕುಲವೆನ್ನುವುದರಲ್ಲಿ ಹುಟ್ಟಿದರೂ ಬಸವಣ್ಣ ಅಪವರ್ಗೀಕರಣ ಗೊಳ್ಳುವುದು ಇದೇ ಕಾರಣಕ್ಕಾಗಿ. ಅದನ್ನು ಬಸವಣ್ಣ ಸರಳವಾಗಿ ನಿರಾಕರಿಸುವ ರೀತಿ ಈ ಕ್ರಮದಲ್ಲಿದೆ.

"ನೆಲವೊಂದೆ ಹೊಲೆಗೇರಿ ಶಿವಾಲಯಕ್ಕೆ
ಜಲವೊಂದೆ ಶೌಚ ಆಚಮನಕ್ಕೆ
ಕುಲ ಒಂದೆ ತನ್ನ ತಾ ಅರಿತವಂಗೆ
ಇಂತಿರಲು ಕುಲವೆತ್ತಣೆಯ ಕೂಡಲ ಸಂಗಮದೇವ ॥"

ಕುಲಗಳು ಇಲ್ಲವಾಗಿಸುವ ಕಾಲಘಟ್ಟದಲ್ಲಿ ನಾವಿದ್ದರೆ, ಕುಲಗಳನ್ನು ಒಂದೇ ಎನ್ನುವ ಕಾಲಘಟ್ಟದಲ್ಲಿ ವಚನಕಾರರಿದ್ದರು. ಇಂತಹ ನೆಲೆಗಳನ್ನು ಮಹಿಳಾ ನೆಲೆಯಲ್ಲಿ, ಅಸ್ಪೃಶ್ಯತಾ ನೆಲೆಯಲ್ಲಿ ವಿಸ್ತರಿಸಿಕೊಂಡಿರುವುದ ರಿಂದಲೇ ಇಂದಿಗೂ ೧೨ನೆಯ ಶತಮಾನ ನಮ್ಮನ್ನು ಕಾಡುತ್ತದೆ. ಅಲ್ಲಿರುವ ಅನೇಕ ಭಿನ್ನತೆಗಳೂ ಸಹ ಬಹುತ್ವದ ಸಂಕೇತ ಎನ್ನುವುದೇ ನನ್ನ ಅಭಿಪ್ರಾಯ. ಕಾಯಕಕ್ಕೆ-ದಾಸೋಹಕ್ಕೆ ಸಿಕ್ಕ ಮಹತ್ವವನ್ನು ಬರೀ ಧಾರ್ಮಿಕ ನೆಲೆಯಲ್ಲಿ ನಿರ್ವಚಿಸಲು ಸಾಧ್ಯವಿಲ್ಲ. ಅದನ್ನು ಶ್ರಮಿಕ ನೆಲೆಯಲ್ಲಿ ವಿಶ್ಲೇಷಿಸಿದಾಗ ಅದು ಮತ್ತಷ್ಟು ಆಯಾಮಗಳನ್ನು ಪಡೆದುಕೊಳ್ಳುವುದರಲ್ಲಿ ಯಾವುದೇ ಅನುಮಾನವಿಲ್ಲ. ಇದೇ ಪರಂಪರೆಯನ್ನು ಇಡೀಯಾಗಿ ಹರಿದಾಸರು ಮುಂದುವರೆಸಲಿಲ್ಲವಾದರೂ, ಕನಕ ಪುರಂದರರು ಇದಕ್ಕೆ ಅಪವಾದವಾಗಿ ನಿಲ್ಲುತ್ತಾರೆ. (ಮೊದಲ ಘಟ್ಟದಲ್ಲಿ) ಕನಕ ತೋರಿದ

ದಾರಿ ಸಹಿಷ್ಣುತೆಯ ದಾರಿ. ಏಕಾಕೃತಿಯ ಮಧ್ಯೆ ಬಹುರೂಪಿಯಾದ ಕನಕದಾಸ ಪರಂಪರೆಯಲ್ಲಿಯೇ ಭಿನ್ನನಾದದ್ದು ಇದೇ ಕಾರಣಕ್ಕಾಗಿ. ಆತನ ಮಹತ್ವದ ಕೃತಿ ರಾಮಧಾನ್ಯಚರಿತ. ಅಲ್ಲಿ ಕನಕದಾಸರು ಪ್ರಸ್ತಾಪಿಸಿರುವ 'ರಾಗಿ' ಬಹುತ್ವದ ಸಂಕೇತವಾಗಿದೆ. ಹಾಗೆ ನೋಡಿದರೆ ಕನಕದಾಸರು ಬೆಳೆದ ಪರಿಸರದಲ್ಲಿ 'ರಾಗಿ' ಪ್ರಮುಖ ಬೆಳೆಯಲ್ಲ ಅಥವಾ ಬೆಳೆಯುವ ಧಾನ್ಯವೂ ಅಲ್ಲ. ಅವರಿಗೆ ಆಹಾರವಾಗುತ್ತಿದ್ದುದು ಜೋಳ ಮತ್ತು ಹಾರಕಗಳು. ಆದರೂ ಅದನ್ನು ಕಾವ್ಯದ ಕಥಾನಾಯಕ ನನ್ನಾಗಿಸಿದ್ದಾರೆ. ಇವತ್ತು ನಡೆಯುತ್ತಿರುವ ಆಹಾರ ಸಂಸ್ಕೃತಿಯ ಬಿಕ್ಕಟ್ಟನ್ನು ಕನಕದಾಸರಂತಹ ಸಂತರು ರೂಪಕವಾಗಿಯೇ ಇಲ್ಲಿ ಚರ್ಚಿಸಿದ್ದಾರೆ. ಭತ್ತಕ್ಕೂ ಮತ್ತು ರಾಗಿಗೂ ನಡೆಯುವ ಸಂವಾದ ಒಂದು ಸಾಂಸ್ಕೃತಿಕ ನೆಲೆಯನ್ನೇ ಅನಾವರಣ ಮಾಡುತ್ತದೆ. ಅದಕ್ಕೆ ಈ ಪದ್ಯವನ್ನು ಗಮನಿಸಿ.

"ಸತ್ವ ಹೀನನು ಬಡವರನು ಕ
ಣ್ಣೆತ್ತಿ ನೋಡೆ ಧನಾಢ್ಯರನು ಬೆಂ
ಬತ್ತಿ ನಡೆವವುಪೇಕ್ಷೆ ನಿನ್ನದು ಹೇಳಲೇನದನು
ಹೆತ್ತ ಬಾಣಂತಿಯರು ರೋಗಿಗೆ
ಪತ್ಯ ನೀನಹೆ ಹೆಣದ ಬಾಯಿಗೆ
ತುತ್ತು ನೀನಹೆ ನಿನ್ನ ಜನ್ಮ ನಿರರ್ಥಕರವೆಂದ"

ಭತ್ತ ಆಳುವ ವರ್ಗವನ್ನು, ಕುಲವರ್ಗವನ್ನು ಪ್ರತಿನಿಧಿಸುತ್ತದೆ. ಆದರೆ 'ರಾಗಿ'ಯು ಸಮಾನತೆಯ ನೆಲೆಯಲ್ಲಿ ಮಾನವೀಕರಣದ ನೆಲೆಯಲ್ಲಿ ಮಾತನಾಡುತ್ತದೆ. ಆದರೂ ಇಲ್ಲಿ ಕನಕದಾಸರು 'ಭತ್ತ'ವನ್ನೂ ನೋಯಿಸುವುದಿಲ್ಲ, ಅಪಮಾನ ಮಾಡುವುದಿಲ್ಲ. ಅದರ ಸಂಕಟಕ್ಕೆ ಸಾಂತ್ವನವನ್ನು, ರಾಮನ ಮೂಲಕ ಕನಕದಾಸರು ಹೀಗೆ ಹೇಳಿಸುತ್ತಾರೆ.

"ದೀನರಲಿ ದಾರಿದ್ರ ಜನದಲಿ
ನೀನು ನಿರ್ದಯನೆಂದೆವಲ್ಲದೆ
ಹೀನಗಳೆದವರಲ್ಲ ನಿನ್ನನು ನಾವು ಸಭೆಯೊಳಗೆ
ಮಾನುಷನು ನಮ್ಮೆಡೆಗೆ ನೀಸುರ

ಧೇನುವಿನ ಸಮ ನಿನ್ನ ಚಿತ್ತದಿ
ಹಾನಿ ದೊರಕಲದೇಕೆ ಬಿಡು ಬಿಡು ಚಿಂತೆ ಯಾಕೆಂದ"

ಕನಕನದು ಬುದ್ಧನ ಮಾರ್ಗ. ಅಂದರೆ ಪರಿವರ್ತನೆಯ ಮಾರ್ಗ. ಭತ್ತವನ್ನು ಪರಿವರ್ತಿಸುವ ಉದ್ದೇಶವೇ ಹೊರತು ಅಪಮಾನಿಸುವ ನಾಶಗೊಳಿಸುವ ಉದ್ದೇಶವಿಲ್ಲ. ಇದು ಬಹುರೂಪಿ ನೆಲೆಯ ಪ್ರಮುಖ ಆಶಯವಾಗಿದೆ. ಹಿಂಸೆಯಿಂದ, ನಾಶದಿಂದ, ಬಹು ದೂರವಿರುವ ಬಹುತ್ವದ ನೆಲೆಯೂ ಮಾನವೀಯ ಸ್ಪಂದನೆಗಳಿಗೆ ಅನನ್ಯ ಮಾದರಿಗಳಾಗಿವೆ.

ಏಕ ಸಂಸ್ಕೃತಿಯನ್ನು ಜಾರಿಗೊಳಿಸಲು ಯತ್ನಿಸುತ್ತಿರುವ ಧರ್ಮಗಳೆಲ್ಲವೂ ಇಂದು ಹಿಂಸಾಸ್ವರೂಪ ತಾಳುತ್ತಿವೆ. ಅದಕ್ಕಿರುವ ಕೇಂದ್ರ ಆಶಯವೇ ಹಿಂಸೆ. ಹೀಗಾಗಿ ಒಂದು ಹಂತದಲ್ಲಿ ಜನಪರವಾಗಿದ್ದಂತಹ ಧರ್ಮಗಳು ನಂತರದಲ್ಲಿ ನಿರಂಕುಶಮತಿಗಳಾಗುತ್ತಿವೆ. ಈ ಅಪಾಯ ಗಳನ್ನು ಕಂಡೇ ಕರ್ನಾಟಕದಲ್ಲಿ ಇಂತಹ ಚರ್ಚೆಗಳು ಆಗುತ್ತಿವೆ.

ಕಾಲಕಾಲಕ್ಕೆ ಸಂಭವಿಸಿದ ಇಂತಹ ಅಸಹಿಷ್ಣುತೆಗಳಿಗೆ ನಮ್ಮ ಧರ್ಮಗಳು ಎಷ್ಟು ಕಾರಣವೋ ಅಷ್ಟೇ ಪ್ರಭುತ್ವಗಳೂ ಕಾರಣವಾಗಿವೆ. ಆ ಪ್ರಭುತ್ವಗಳು ಸೃಷ್ಟಿಸಿದ ಈ ವಾತಾವರಣಕ್ಕೆ ನಮ್ಮ ಅನುಭಾವ ಪರಂಪರೆ ಪ್ರತಿಕ್ರಿಯಿಸಿದ್ದು ಅಸಮಾನ್ಯವಾಗಿದೆ. ಹದಿನೆಂಟನೆಯ ಶತಮಾನದ ಅನುಭಾವಿ ಕವಿ ಬಾಲಲೀಲಾ ಮಹಾಂತ ಶಿವಯೋಗಿಯ ಒಂದು ತತ್ವಪದದ ಮೂಲಕ ಇದನ್ನು ಗಮನಿಸಬಹುದು.

"ನೀನೆಲ್ಲಿ ನಿನ್ನ ದೇಶೆಲ್ಲಿ ಕೇಳಲೆ ರಾಜ
ನಾನೆಲ್ಲಿ ನಾನಿರುವ ಸುಡುಗಾಡ ಡಾವೆಲ್ಲಿ
ಏನಾಶ ಪಾಶದಲಿ ಬಿಗಿದೆನ್ನ ಕಟ್ಟಿದೆಯೋ ಕಳರಸು ಕಟ್ಟುವ ರೂಢಿ

ಬಾಲಬ್ರಹ್ಮಿಯು ನಾನು ಬಳಸಿ ಬ್ರಹ್ಮಿಯು ನೀನು
ಬಹಳ ಹೇಳುವುದೇನು ತಿಳುವಳಿಕೆ ರಾಜನಿಗೆ
ಮೇಲೆ ಚಂದದ ಸುಖವು ಒಳಗೇನು ಸುಖವಿಲ್ಲ
ಮೈಸೂರು ಮೈಚೂರವೋ

ನಮ್ಮ ಸುಖದುಃಖಗಳ ಕೇಳುವರು ಯಾರಿಲ್ಲ
ನಮ್ಮ ಸುಖ ಮೂಕ ಸಕ್ಕರೆ ಮೆದ್ದ [ಪರಿಯಂತೆ
ನಮ್ಮ ದುಃಖವು ಕಳ್ಳ ಚೇಳೂರಿದಂತಿಹುದು ಹುರುಳಿಲ್ಲವೆಲೆ ರಾಜನೆ

ವಸುಧಿಪನೆ ನಿನ್ನ ಮೈಸೂರೆಂಬ ಬೆಲ್ಲದ
ಮುಸುರಿಗಡಿಗೆಗೆ ಲಕ್ಷಗಟ್ಲೆ ಭಿಕ್ಷುಕರೆಂಬ
ಸಸಿನೆ ಮಕ್ಷಿಕದಂಡು ಮುಸುಕಿಹುದದೇನೆಂಬೆ
ಮುತ್ತಿಗೆಯ ಹಾಕಿದಂತೆ

ಇರದೆ ನಂಜಾಖ್ಯ ವೆಂಕಟರಾಯ ಕೇಳಿರೈ
ಮೂರುವರೆ ಮೊಳಗೀಬು ನಾವಿರುವ ಸ್ಥಳ ನೋಡಿ
ದೊರೆ ಕೊಟ್ಟ ರಥ, ಮೇಣ, ಛತ್ರ, ಚಾಮರಗಳ
ನಾನೆಲ್ಲಿ ಮಡಗಿಕೊಳಲಿ?
(ಕೈವಲ್ಯ ದರ್ಪಣ)

ಮೈಸೂರಿನ ಮುಮ್ಮಡಿ ಕೃಷ್ಣರಾಜ ಒಡೆಯರು ನೀಡಿದ ಕಾಣಿಕೆಗಳಿಗೆ ಮಹಾಂತ ಶಿವಯೋಗಿಗಳು ತೋರಿದ ಪ್ರತಿಕ್ರಿಯೆ ಮಹತ್ವದ್ದಾಗಿದೆ. ಇಂತಹದ್ದೇ ಅಭಿಪ್ರಾಯವನ್ನು, ವಸಾಹತುಶಾಹಿ ವಿರೋಧಿ ನಿಲುವನ್ನು ಷರೀಫರು ಹೊಂದಿದ್ದರು. ಅವರು ಒಂದೆಡೆ ವಿಸ್ಮಯದಿಂದ, ಬೆರಗಿನಿಂದ ಅದನ್ನು ಕಂಡರು(ಯಂತ್ರಗಳನ್ನು), ಅದರಿಂದಾದ ವಿಲಕ್ಷಣ ಸ್ಥಿತಿಯನ್ನು ತಳಮಳವನ್ನು ಈ ಕೆಳಗಿನ ತತ್ವಪದಗಳಲ್ಲಿ ಕಾಣಬಹುದು.

"
....
ತಂಪುಳ್ಳ ಉಕ್ಕಿನೊಳು ಹುಟ್ಟಿದ ಸೂಜಿಯೇ
ಸಿಂಪಿಗಣ್ಣನಿಗೆ ಬಲವಾದ ಸೂಜಿಯೇ
ಇಂಪುಳ್ಳದಾದ ಸೊಂಪುಗುಡಿಸುವಂಥ
ಕಂಪನಿ ಸರಕಾರ ವಶವಾದ ಸೂಜಿಯೇ"

ಇಂತಹವೇ ರಚನೆಗಳು ನಾಗಲಿಂಗಸ್ವಾಮಿ, ಕಡಕೋಳ ಮಡಿವಾಳಪ್ಪ, ಸರ್ಪಭೂಷಣ ಶಿವಯೋಗಿಯವರಲ್ಲಿ ಕಾಣುತ್ತೇವೆ.

ಇನ್ನು ಭಾಷಿಕ ನೆಲೆಯಲ್ಲಿ, ಪ್ರಾದೇಶಿಕ ನೆಲೆಯಲ್ಲಿ 'ಬಹುರೂಪಿ'ಯ ಆಯಾಮಗಳನ್ನು ಹೊಂದಿರುವುದನ್ನು ಕಾಣುತ್ತೇವೆ. ಇದಕ್ಕೆ ಬಿಜಾಪುರದ ಸೂಫಿ ಸಂತ ನಂಗಾಶಾಹನ ಶಿಷ್ಯ, ಅವಧೂತನಾದಂತಹ ಕಾಖಂಡಕಿ ಮಹಿಪತಿದಾಸರ ತತ್ವಪದ ಒಂದು ಒಳ್ಳೆಯ ಉದಾಹರಣೆಯಾಗಿದೆ.

"ಎಲ್ಲಾ ಒಂದೇ ಮಾತಿನ ಸೊಗಸು ಶಿವನಾಟಾ ಶಿವನಾಟಾ
ಅಪಸಮೆ ಅಪಲಧನಾ ಸಬರ್ಝೂಟಾ ಸಬರ್ಝೂಟಾ
ಚಪ್ಪೆವಯ್ಯಾ ಎಂದು ಹೇಳುವ ಗುರುಸೀತಾ ಗುರುಸೀತಾ
ಆನಂದ ಆಹೆ ತುಜ ಮಹಿಪತಿ ಸುಖಿ ಮೋಠಾ"[6]

ಈ ತತ್ವಪದದ ಮೊದಲ ಸಾಲು ಕನ್ನಡ; ಎರಡನೆಯ ಸಾಲು ಉರ್ದು; ಮೂರನೆಯದರಲ್ಲಿ ತೆಲುಗು, ಕನ್ನಡ ಮತ್ತು ಮರಾಠಿ ಭಾಷೆಗಳಿವೆ. ಕೊನೆಯ ಸಾಲು ಇಡಿಯಾಗಿ ಮರಾಠಿಯಾಗಿದೆ. ಪ್ರಭುತ್ವದ ಭಾಗವಾಗಿದ್ದ ಮಹೀಪತಿ ನಂಗಾಶಾಹನ ಸಂಪರ್ಕದಿಂದ ಆಸ್ಥಾನವನ್ನು ತ್ಯಜಿಸಿದ್ದಲ್ಲದೇ ಅಬ್ಬ ಮಹೀಪತಿದಾಸರಾಗಿ ಪರಿವರ್ತನೆಗೊಂಡದ್ದು ಬಹುತ್ವದ ನೆಲೆಯಿಂದಲೇ. ಏಕರೂಪಿಯು ವಿರೂಪಕ್ಕೆ ಒಳಗಾಗವೆ. ಅದನ್ನು ಬಹುರೂಪಿಯಲ್ಲಿ ನೋಡಿದ್ದರಿಂದಲೇ, ಅವರಿಗೆ ನಂಗಾಶಾಹ ಗುರುವಾಗಿ ಕಂಡ. ಷರೀಫರ ವಿಷಯದಲ್ಲಿ ಗುರುಗೋವಿಂದ ಭಟ್ಟರಿಗೆ ಶಿಷ್ಯನಾಗಿ 'ಷರೀಫ' ಕಂಡ. ಈ ಕೊಡುಕೊಳ್ಳುವಿಕೆಯೇ ಬಹುರೂಪಿ ನೆಲೆಯ ಮೂಲಭೂತ ಗುಣವಾಗಿದೆ. ಹೀಗಾಗಿ ಕರ್ನಾಟಕದ ಬಹುತ್ವ ಇರುವುದೇ ಶ್ರೀರಾಮನ ಬಳಿ. ಶ್ರೀರಾವಣನ ಬಳಿ. ಮಾತೆ ಮಂಥರೆಯ ಬಳಿ. ಕುಮಾರವ್ಯಾಸನ ಕೃಷ್ಣನ ಬಳಿ. ಬುದ್ಧನ ಬಳಿ. ಬಸವಣ್ಣ ಬಳಿ. ಗಾಂಧೀಯ ಬಳಿ, ಅಕ್ಷರದ ಅವ್ವ ಸಾವಿತ್ರಿಬಾಯಿ ಫುಲೆ ಬಳಿ. ಡಾ. ಬಾಬಾ ಸಾಹೇಬರ ಬಳಿ. ಇವೆಲ್ಲವೂ ಕರ್ನಾಟಕ ದರ್ಶನದ ಪೂರ್ವ ಪೀಠಿಕೆಗಳೆಂದೇ ನಾನು ಭಾವಿಸಿದ್ದೇನೆ.

ನಮ್ಮ ಕಾಲದ ಶಿಕ್ಷಣ. ಆರ್ಥಿಕತೆ. ಕೃಷಿ. ಮಹಿಳೆ. ಶೋಷಿತವರ್ಗದ ಕುರಿತಾದ ಗಂಭೀರ ಚರ್ಚೆಗಳನ್ನು ಇಂತಹ ಸಮ್ಮೇಳನಗಳಲ್ಲಿ ನಡೆಯಬೇಕೆಂದು ನಾನು ಬಯಸುತ್ತೇನೆ. ಯಾಕೆಂದರೆ ಮಾನವ ಕೇಂದ್ರಿತ ಲೋಕದೃಷ್ಟಿಯಲ್ಲಿ ಮಹಿಳೆಯ ಸ್ಥಾನವೇನು? ರೈತನ ಸ್ಥಾನವೇನು?

ಮಕ್ಕಳ ಸ್ಥಾನವೇನು? ಶ್ರಮಿಕ ವರ್ಗದ ಸ್ಥಾನವೇನು? ನಿರ್ಧರಿಸಬೇಕಿದೆ. ಬಹುತ್ವವನ್ನು ಬರೀ ಧಾರ್ಮಿಕ ನೆಲೆಯಲ್ಲಿ ಪರಿಭಾವಿಸದೇ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಭಾಷೆ, ಪ್ರಾದೇಶಿಕತೆಯ ನೆಲೆಯಲ್ಲಿ ವಿಶ್ಲೇಷಿಸ ಬೇಕಾಗಿದೆ.

ನಾವು ಚರ್ಚಿಸಬೇಕಾದ ವಿಷಯಗಳಲ್ಲಿ ಮಹಿಳಾ ಸಮಸ್ಯೆಗಳು ಪ್ರಧಾನವಾದವುಗಳೇ. ಕಳೆದ ಒಂದು ತಿಂಗಳಿನಿಂದ ಮಹಿಳಾ ಸಮ್ಮಂದಿ ಸಂಗತಿಗಳು ಮುನ್ನೆಲೆಗೆ ಬಂದು ಚರ್ಚೆಗೊಳಪಡುತ್ತಿವೆ. ಅವುಗಳಲ್ಲಿ ಒಂದು ಸರ್ವೋಚ್ಚ ನ್ಯಾಯಾಲಯ ಮಹಿಳೆಯ ವಿವಾಹವೇತರ ಸಮ್ಮಂದವನ್ನು ಸಹಾನುಭೂತಿಯಿಂದ ನೋಡಿ ನೀಡಿದ ತೀರ್ಪು. ಮತ್ತೊಂದು ಎಲ್ಲ ವಯೋಮಾನದ ಮಹಿಳೆಯರಿಗೂ ಅಯ್ಯಪ್ಪಸ್ವಾಮಿ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡಿದ್ದು ಹಾಗೂ ತ್ರಿವಳಿ ತಲಾಖ್ ವಿಷಯ. ವಿವಾಹೇತರ ಸಮ್ಮಂದ ಮತ್ತು ತ್ರಿವಳಿ ತಲಾಖ್‌ನ ಕುರಿತು ನ್ಯಾಯಾಲಯ ನೀಡಿದ ತೀರ್ಪುಗಳನ್ನು ಸಮಾಜ ಸಹಾನುಭೂತಿಯಿಂದ ನೋಡಿದ್ದರೆ ಆತಂಕ ಪಡುತ್ತಿರಲಿಲ್ಲ. ಮಹಿಳಾ ಸ್ವಾತಂತ್ರ್ಯದ ಬಗ್ಗೆ ಊಳಿಗಮಾನ್ಯ ವ್ಯವಸ್ಥೆಯ ಸಾಂಸ್ಕೃತಿಕ ಮತ್ತು ಸಾಂಸ್ಥಿಕ ಧಾರ್ಮಿಕ ನೆಲೆಯಿಂದ ನೋಡಿದ ಕಾರಣದಿಂದಲೇ ಈ ತೀರ್ಪು ಕುಟುಂಬ, ಸಂಸಾರ, ಸಂಸ್ಕೃತಿಯನ್ನು ನಾಶಮಾಡುತ್ತದೆಯೆಂಬ ಭಯಕಾಡುತ್ತಿದೆ. ಇದನ್ನು ಅರಗಿಸಿಕೊಳ್ಳುವ ಪೂರ್ವದಲ್ಲಿಯೆ ಅಯ್ಯಪ್ಪಸ್ವಾಮಿ ದೇವಾಲಯ ಪ್ರವೇಶದ ಸಂಗತಿ ಸಂಪ್ರದಾಯನಿಷ್ಠರನ್ನು ಇನ್ನಿಲ್ಲದಂತೆ ನಿದ್ದೆಗೆಡಿಸಿತು. ಸಂವಿಧಾನವನ್ನು ಒಪ್ಪಿಕೊಂಡ ಪ್ರಜಾಪ್ರಭುತ್ವದ ಬಹುದೊಡ್ಡ ದೇಶದಲ್ಲಿ ಮಹಿಳೆಯರನ್ನು ನಡೆಸಿಕೊಳ್ಳುತ್ತಿರುವ ಸಾಮಾಜಿಕ, ಧಾರ್ಮಿಕ ನೀತಿಗಳು ಮತ್ತೊಮ್ಮೆ ವಿಮರ್ಶೆಗೆ ಅವಕಾಶ ಕಲ್ಪಿಸಿವೆ. ನಮ್ಮ ಸಂವಿಧಾನದ ಅನುಚ್ಛೇದ ೧೫ರಲ್ಲಿ ಲಿಂಗಬೇಧದ ಆಧಾರದ ಮೇಲೆ ತಾರತಮ್ಯ ಧೋರಣೆಯನ್ನು ತೋರಬಾರದೆಂದು ಸೂಚಿಸಲಾಗಿದೆ. ಅದರಡಿಯಲ್ಲಿ ಅಯ್ಯಪ್ಪಸ್ವಾಮಿ ದೇವಾಲಯ ಪ್ರವೇಶಕ್ಕೆ ಎಲ್ಲ ವಯೋಮಾನದ ಮಹಿಳೆಯರಿಗೆ ಅವಕಾಶ ಕಲ್ಪಿಸುವುದರ ಮೂಲಕ ಘನನ್ಯಾಯಾಲಯ ಸಂವಿಧಾನದ ಲಿಂಗ ಸಮಾನತೆಯ ಆಶಯವನ್ನು ಎತ್ತಿ ಹಿಡಿದಿದೆ. ಆದರೆ ಪ್ರವೇಶಕ್ಕೆ ಧಾರ್ಮಿಕ ಸಂವಿಧಾನ ಅಡ್ಡಿಪಡಿಸುತ್ತಿದೆ. ಜನ

ಸಮುದಾಯದ ನಂಬಿಕೆ ಭಾವನೆಗಳು ಇದನ್ನು ಪ್ರಬಲವಾಗಿ ವಿರೋಧಿಸುತ್ತಿವೆ ಎಂದು ಬಿಂಬಿಸಲಾಗುತ್ತಿದೆ. ಈ ಘಟನೆಯಿಂದ ಒಂದು ಪ್ರಶ್ನೆ ಕಾಡುತ್ತದೆ. ಅದೇನೆಂದರೆ ಈ ದೇಶವನ್ನು, ಈ ದೇಶವಾಸಿಗಳನ್ನು, ಅವರ ರಕ್ಷಣೆಯನ್ನು, ಅವರನ್ನು ಮುನ್ನಡೆಸುವ ಶಕ್ತಿ ಸಂವಿಧಾನಕ್ಕೋ ಅಥವಾ ನಂಬಿಕೆ, ಭಾವನೆಗಳಿಗೋ ಎಂದು. ಇದು ಕೇವಲ ಮಹಿಳೆಯರ ದೇವಾಲಯ ಪ್ರವೇಶದ ಸಂದರ್ಭದಲ್ಲಿ ಕಾಣಿಸಿಕೊಂಡ ಭಾವನಾತ್ಮಕ ಪ್ರತಿಕ್ರಿಯೆಯಲ್ಲ. ಶೂದ್ರ ಗಂಡಸರು ಸವರ್ಣೀಯರ ಅಧಿಪತ್ಯವಿರುವ ಸಾರ್ವಜನಿಕ ಸ್ಥಳಗಳ ಪ್ರವೇಶದ ಸಂದರ್ಭದಲ್ಲಿಯೂ ಎದುರಾದ ಬಿಕ್ಕಟ್ಟು ಎಂಬುದನ್ನು ನೋಡಿದ್ದೇವೆ. ಯಾವುದೋ ಕಾಲದಲ್ಲಿ ಹುಟ್ಟಿಕೊಂಡ ನಂಬಿಕೆ ಆಚಾರಗಳು ಎಲ್ಲ ಕಾಲಕ್ಕೂ ನಿಯಂತ್ರಕಗಳಾಗಿ ನಿಲ್ಲುವುದರ ಹಿಂದೆ ಬಹುದೊಡ್ಡ ರಾಜಕಾರಣವಿರುತ್ತದೆ. ಅದು ಲಿಂಗರಾಜಕಾರಣವೂ ಹೌದು ಧಾರ್ಮಿಕ ರಾಜಕಾರಣವೂ ಆಗಿರುತ್ತದೆ. ಇದಕ್ಕೆ ಪ್ರಭುತ್ವದ ಸಮ್ಮತಿಯಿರುತ್ತದೆ. ಎಲ್ಲ ಕಾಲದ ಎಲ್ಲ ಪ್ರಭುತ್ವಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ನಿರಂತರ ಸಮಾಜದಲ್ಲಿ ಏನಾದರೂ ನಡೆಯುವಂತೆ ಮತ್ತು ಜನರು ಅದರ ಕುರಿತು ಗಮನಕೇಂದ್ರೀಕರಿಸುವಂತೆ ಪಿತೂರಿ ಮಾಡಿರುವುದನ್ನು ಚರಿತ್ರೆಯಲ್ಲಿ ಕಾಣಬಹುದು.

ಮಕ್ಕಳು ಮತ್ತು ಋತುಚಕ್ರ ನಿಂತ ಮಹಿಳೆಯರಿಗೆ ಮಾತ್ರ ಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಪ್ರವೇಶವೆಂಬುದು ಕುತರ್ಕದ್ದು. ಋತುಚಕ್ರದೊಳಗಿನ ಮಹಿಳೆಯರು ದೇವಾಲಯ ಪ್ರವೇಶ ಮಾಡುವುದರಿಂದ ದೇವಾಲಯದ ಪಾವಿತ್ರ್ಯತೆ ನಾಶವಾಗುತ್ತದೆ ಎಂದು ಇದನ್ನು ವಿರೋಧಿಸುವವರು ಹೇಳುತ್ತಿರುವ ಮಾತುಗಳಿಗೆ ಯಾವುದೇ ತಾತ್ವಿಕ, ತಾರ್ಕಿಕತೆಯಿಲ್ಲ. ಈ ಪ್ರತಿರೋಧವನ್ನು ತಾತ್ವಿಕವಾಗಿ, ತಾರ್ಕಿಕವಾಗಿ ನಮ್ಮ ಜನಸಮುದಾಯದ ಅರಿವಿನಂತಿದ್ದ ಆಚಾರದಂತಿದ್ದ ತತ್ವಪದಕಾರರು ನೂರಾರು ವರ್ಷಗಳ ಹಿಂದೆಯೇ ಪ್ರಶ್ನಿಸಿರುವರು. ಕಡಕೋಳ ಮಡಿವಾಳಪ್ಪ ಎಂಬ ತತ್ವಪದಕಾರ ಎತ್ತಿರುವ ಮೈಲಿಗೆ ಮುಡಚೆಟ್ಟಿನ ಪ್ರಶ್ನೆ ಈ ಕಾಲದಲ್ಲಿ ಮುನ್ನೆಲೆಗೆ ಬಂದು ಚರ್ಚೆಗೆ ಒಳಗಾಗಿರುವುದು ದುರಂತವೇ ಸರಿ. ಜಗತ್ತು ವಿಸ್ಮಯಗೊಳ್ಳುವ ಹಾಗೇ

ವಿಜ್ಞಾನದ ಬೆಳವಣಿಗೆಯಲ್ಲಿ, ಆವಿಷ್ಕಾರದಲ್ಲಿ ತೊಡಗಿರುವ ದೇಶದಲ್ಲಿ ಉದ್ಭವಿಸಿರುವ ಬಿಕ್ಕಟ್ಟನ್ನು ನೋಡಿದರೆ ನಾವು ನಿಂತ ನೆಲದಲ್ಲಿ ಚಲಿಸಿಯೆ ಇಲ್ಲ ಎನಿಸುತ್ತದೆ. ಮನುಷ್ಯನ ಹುಟ್ಟಿಗೆ ಸಮ್ಮಂದಿಸಿ ಕಡಕೋಳ ಮಡಿವಾಳಪ್ಪನವರು ಹಾಕುವ ಪ್ರಶ್ನೆ ಇಡೀ ಪ್ರಸಂಗವನ್ನು ಪ್ರಶ್ನಿಸುವಂತಿರುವ ರೀತಿ ಹೀಗಿದೆ"

"ಮುಡಚಟ್ಟಿನೊಳು ಬಂದು ಮುಟ್ಟೀ ತಟ್ಟೀ ಅಂತೀರಿ
ಮುಡಚಟ್ಟು ಎಲ್ಲ್ಯಾದೆ ಹೇಳಣ್ಣ
ಮುಟ್ಟಾದ ಮೂರು ದಿನಕ ಹುಟ್ಟಿ ಬಂದೀರಿ ನೀವು
ಮುಡಚಟ್ಟು ಎಲ್ಲ್ಯಾದೆ ಹೇಳಣ್ಣ"

ಚಂದ್ರಲೋಕ ಮಂಗಳಲೋಕದ ಕುರಿತು ಮಾತನಾಡುವ ಈ ಕಾಲದಲ್ಲಿ ನೂರಾರು ವರ್ಷಗಳ ಹಿಂದೆ ನಮ್ಮ ತತ್ವಪದಕಾರ ಅನುಭವದ ಆಧ್ಯಾತ್ಮದ ನೆಲೆಯಿಂದ ಕೇಳಿದ ಪ್ರಶ್ನೆಯಲ್ಲಿ ತರ್ಕವಿದೆ, ವಿಜ್ಞಾನವಿದೆ. ಈ ಮಾತುಗಳನ್ನು ದೇವಾಲಯ ಪ್ರವೇಶವನ್ನು ವಿರೋಧಿಸುವವರು ಹಾಕಿಕೊಳ್ಳಬೇಕು. ವಿರೋಧಿಸುವವರು ಯಾವುದೇ ಪ್ರಶ್ನೆಗಳನ್ನು, ಕಾರ್ಯಕಾರಣಗಳನ್ನು ಹಾಕಿಕೊಳ್ಳುವುದೇ ಇಲ್ಲ. ಸಮೂಹ ಸನ್ನಿಗೆ ಒಳಗಾಗುವ ದುರ್ಬಲ ಮನಸ್ಸುಗಳಿಗೆ ಪಕ್ಷಬೇಧ, ಲಿಂಗಬೇಧವಿರುವುದಿಲ್ಲ. ಹೆಂಗಸರಾದಿಯಾಗಿ ಗಂಡಸರು ಗುಡಿ ಪ್ರವೇಶಕ್ಕೆ ಪ್ರತಿರೋಧ ಒಡ್ಡುತ್ತಿರುವುದರ ಹಿಂದೆ ಕಾಣದ ಕೈಗಳಿರುತ್ತವೆ. ಸಂವಿಧಾನದ ಆಶಯಗಳಿಗೆ ಸಾಂಪ್ರದಾಯಿಕ ನಂಬಿಕೆಗಳು ಒಡ್ಡಿರುವ ಸವಾಲನ್ನು ಹೇಗೆ ಅರ್ಥಮಾಡಿಕೊಳ್ಳಬೇಕು ಎಂಬ ಪ್ರಶ್ನೆಗಳು ಎದುರಾದಾಗ ನಮಗೆ ಪರಂಪರೆಯ ಒಡಲಿನಿಂದ ಕಡಕೋಳ ಮಡಿವಾಳಪ್ಪನವರನ್ನು ಎಬ್ಬಿಸಿ ಕರೆತರಬೇಕಾಗುತ್ತದೆ. ಅದು ತಾಳ್ಮೆಯಿಂದ ಸಹನೆಯಿಂದ ಆಗಬಹುದಾದ ಕಾರ್ಯ. ಕತ್ತಿ, ಗುರಾಣಿಗಳಿಗಿಂತಲೂ ಪ್ರೀತಿ, ನಂಬಿಕೆ, ವಿಶ್ವಾಸಗಳ ಮೂಲಕ ಈ ಯುದ್ಧ ಗೆಲ್ಲುವ ಇರಾದೆ ಮನುಷ್ಯ ಘನತೆಯದ್ದಾಗಬೇಕು. ಇದು ಬುದ್ಧ-ಬಸವ-ಗಾಂಧಿಯ ಮಾರ್ಗ.

ದಲಿತ-ಮಹಿಳೆ, ರೈತರು, ದುಡಿಯುವವರಿಗೆ ಸಂವಿಧಾನ ರಕ್ಷಣೆ ನೀಡುವ ಹೊತ್ತಿನಲ್ಲಿ ಪ್ರತಿರೋಧಗಳು ಎಲ್ಲ ಕಡೆಗಳಿಂದಲೂ ಕಾಣಿಸಿ

ಕೊಳ್ಳುತ್ತವೆ. ಸ್ವಾತಂತ್ರ್ಯ ನಂತರ ಈ ಬೃಹತ್ ದೇಶವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೊತ್ತ ಸಂವಿಧಾನವನ್ನು ದೇಶವಾಸಿಗಳು ಅರ್ಥ ಮಾಡಿಕೊಳ್ಳದ ಕಾರಣ ಈ ಪ್ರತಿರೋಧಿಸುವವರ ಸಂಖ್ಯೆ ಹೆಚ್ಚಾಗುತ್ತಿರುವುದು ಒಂದು ಕಡೆಯಾದರೆ ಪ್ರಭುತ್ವಗಳು ಸಂವಿಧಾನದ ಆಶಯಗಳನ್ನು, ನ್ಯಾಯಾಲಯದ ತೀರ್ಪುಗಳನ್ನು ಪ್ರಾಂಜಲ ಮನಸ್ಸಿನಿಂದ ಸ್ವೀಕರಿಸದೆ 'ಮತಕಾರಣ'ಗಳ ಲೆಕ್ಕಾಚಾರಕ್ಕೆ ಜನರ ಪರೀಕ್ಷೆ ನಡೆಸುತ್ತವೆ. ಯಾವುದೇ ಸಾರ್ವಜನಿಕ ಸ್ಥಳಗಳಾದ ದೇವಾಲಯ, ಮಸೀದಿ, ಮಂದಿರ, ಚರ್ಚ್‌ಗಳಲ್ಲಿ ಜಾತಿ, ಲಿಂಗ ಕಾರಣಗಳಿಂದ ಪ್ರವೇಶ ನಿರಾಕರಿಸುವುದು ಪ್ರಜಾಪ್ರಭುತ್ವವನ್ನು ಗೌರವಿಸಿದಂತಲ್ಲ. ಬಹುಸಂಸ್ಕೃತಿ ಜನರ ಬದುಕು, ದೇವರುಗಳು, ಧರ್ಮಗಳು, ಭಾಷೆಗಳು, ಆಚಾರ ವಿಚಾರಗಳನ್ನು ಒಳಗೊಂಡ ಈ ನೆಲದ ಬಹುರೂಪಿತನದ ಸೌಂದರ್ಯವನ್ನು ನಾಶಮಾಡಲು ಇಂದು ಪ್ರಯತ್ನಗಳು ನಡೆಯುತ್ತಿವೆ.

ನಮ್ಮ ನೆಲ ಸರ್ವಧರ್ಮಗಳ ಅಡುಂಬೊಲವೆಂಬುದನ್ನು ಕನ್ನಡ ಸಾಹಿತ್ಯ ಪರಂಪರೆಯೇ ಸಾರಿ ಹೇಳಿದೆ. ಆದರೆ ಈ ಹೊತ್ತಿನಲ್ಲಿ ನನಗೆ ಮತ್ತೆ ಮತ್ತೆ ಕಾಡುವ ಸಂಗತಿಯೆಂದರೆ ನಮ್ಮ ದೇವರುಗಳು, ಧರ್ಮಗಳೂ, ಮುಖವಾಡ ಹಾಕಿಕೊಂಡು ಬೀದಿಯಲ್ಲಿ ಕತ್ತಿ ಮಸೆಯುತ್ತಿರುವುದೇಕೆ? ಪ್ರಾದೇಶಿಕವಾಗಿ ದೇವರು, ಧರ್ಮದ ಆಚರಣೆಗಳು ಎಷ್ಟೊಂದು ವಿಶಿಷ್ಟತೆಯನ್ನು ಹೊಂದಿದೆಯೋ ಜೀವನ ಕ್ರಮದಲ್ಲಿಯು ವೈವಿಧ್ಯತೆಯಿದೆ. ಈ ವೈವಿಧ್ಯತೆಗೆ ಎಲ್ಲ ಕಾಲದಲ್ಲಿಯೂ ಆತಂಕ ಎದುರಾಗಿದೆ. ಆತಂಕ ಎದುರಾದಾಗಲೆಲ್ಲ ನಮ್ಮ ಪ್ರಜ್ಞಾವಂತರು ಧಾರ್ಮಿಕ ಸಾಮಾಜಿಕ ಪರಿಭಾಷೆಯಲ್ಲಿ ಉತ್ತರಿಸುತ್ತ ಆತಂಕ ನಿವಾರಿಸಿಕೊಂಡಿರುವರು. ಇಂದಿಗೂ ಬಯಲು ಸೀಮೆಯ ದೇವರು, ಧರ್ಮಗಳು ಸೌಹಾರ್ದಯುತ ವಾಗಿವೆ. ಉತ್ತರ ಕರ್ನಾಟಕದಲ್ಲಿ ಮುಸ್ಲಿಂರೇ ಇಲ್ಲದ ಎಷ್ಟೋ ಹಳ್ಳಿಗಳಲ್ಲಿ ದರ್ಗಾಗಳಿವೆ. ಮೊಹರಂನಂತಹ ಆಚರಣೆಗಳನ್ನು ಹಿಂದೂಗಳೆ ಮಾಡುತ್ತಾರೆ.ದರ್ಗಾದ ದೇವರುಗಳಿಗೆ ಬ್ರಾಹ್ಮಣರ ಮನೆಯಿಂದಲೇ ಸಕ್ಕರೆ ಹೋದ ಮೇಲೆ ಮೊಹರಂ ಪ್ರಾರಂಭವಾಗುತ್ತದೆ. ಮೊಹರಂ ಹಬ್ಬದಲ್ಲಿ ಹಿಂದೂಗಳೇ ದೇವರನ್ನು ತರುವ ಹೊರುವ ಕಾರ್ಯ ಮಾಡುವರು. ಎಲ್ಲರ ಮನೆಗಳಲ್ಲೂ ಚೊಂಗಿ, ಮಾದಲಿಯ ಗಮಲು

ಇಂದಿಗೂ ಇರುವುದು. ಆದರೆ ಕರಾವಳಿಯ ಸಮೃದ್ಧವಾದ ಹಸಿರು, ನೀರು ನೆರಳಿನಾಶ್ರಯದಲ್ಲಿರುವ ದೇವರುಗಳು ಮಾತ್ರ ಕೂಡಿ ಬದುಕುತ್ತಿಲ್ಲವೆನ್ನುವುದು ಎಲ್ಲರಿಗೂ ತಿಳಿದಿರುವ ಸತ್ಯ. ಜೈನಕಾಶಿಯೆಂದೆ ಕರೆಯಿಸಿಕೊಂಡ ನೆಲದ ಮಣ್ಣಿನಲ್ಲಿ ಅಹಿಂಸೆ ಬೆರೆತು ಸೌಹಾರ್ದತೆ ಯೆಂಬುದು ಜನ ಬದುಕಲ್ಲಿ ಸಹಜವಾಗಿಯೆ ಇರಬೇಕಾಗಿತ್ತು. ಜನಕೂಡಿ ಬದುಕಲು ಹಂಬಲಿಸಿದರೂ, ರಾಜಕೀಯ ಉದ್ದೇಶಿತ ಧರ್ಮಕಾರಣಗಳು ಅಡ್ಡಿಯಾಗುತ್ತಿವೆ ಎಂಬುದೆ ಸಂಕಟದ ಸಂಗತಿ. ನಮ್ಮ ಬಯಲು ಸೀಮೆಯ ಕವಿ ಸರ್ವಜ್ಞ, ಸಮಾಜದ ಕಟು ವಿಮರ್ಶಕ ಮತ್ತು ನಿಷ್ಠುರವಾದಿ. ಅಂತಹ ನಿಷ್ಠುರವಾದಿ ಸರ್ವಜ್ಞ ಧರ್ಮದ ಆಯ್ಕೆಯ ಪ್ರಶ್ನೆ ಬಂದಾಗ ಜೈನ ಧರ್ಮವನ್ನು ಒಪ್ಪಿಕೊಳ್ಳುತ್ತಾನೆ. ತಾನೇಕೆ ಜೈನ ಧರ್ಮವನ್ನು ಒಪ್ಪಿಕೊಳ್ಳುತ್ತೇನೆ ಎಂಬುದನ್ನು ಹೀಗೆ ಸ್ಪಷ್ಟಪಡಿಸುತ್ತಾನೆ.

"ಕೊಲುವ ಧರ್ಮವ[ನೊಯ್ದು] ಒಲೆಯೊಳಗಿಕ್ಕುವಾ
ಕೊಲಲಾಗದೆಂಬ ಜೈನನ ಮತವೆನ್ನ
ತಲೆಯ ಮೇಲಿರಲಿ ಸರ್ವಜ್ಞ"

[ಸರ್ವಜ್ಞನ ಸಮಗ್ರ ತ್ರಿಪದಿಗಳು, ಸಂ.ರಾಗೌ.ಪು.ಸಂ.೫೬೭]

ಜೈನ ಮುನಿಗಳು ನಡೆದಾಡಿದ, ಇಂದಿಗೂ ಬಸದಿಗಳೂ ಇರುವ ಈ ಸಂಪದ್ಭರಿತ ನೆಲದಲ್ಲಿ ಹಿಂಸೆ ಏಕೆ ವಿಜೃಂಭಿಸುತ್ತಿದೆ? ಬಯಲು ಸೀಮೆಯ ದೇವರುಗಳಿಗಿಂತಲೂ ಸಂಪತ್ತಿನಲ್ಲಿ, ಶಕ್ತಿಯಲ್ಲಿ, ಅಸಂಖ್ಯಾತ ಭಕ್ತರನ್ನು ಹೊಂದಿರುವ ಶ್ರೀಮಂತ ದೇವರುಗಳು ಈ ನೆಲದ ಮಕ್ಕಳಿಗೆ ಕೂಡಿಬದುಕುವ ವಿವೇಕವನ್ನು, ಸದ್ಬುದ್ಧಿಯನ್ನು ಏಕೆ ಕರುಣಿಸಲಿಲ್ಲ? ಇಂದಿಗೂ ಬಯಲು ಸೀಮೆಯ ಮಕ್ಕಳು ಕೂಡಿ ಆಡುತ್ತವೆ, ಹಾಡುತ್ತವೆ, ಓದುತ್ತವೆ. ಕೈ ಕೈ ಹಿಡಿದು ನಡೆದಾಡುತ್ತವೆ. ಇದು ನಮ್ಮ ಬದುಕಿನ ಸಹಜತೆ. ಕರ್ನಾಟಕದ ಒಂದು ಭಾಗದಲ್ಲಿ ಧರ್ಮ ದೇವರುಗಳ ಆಚೆ ಕೂಡಿ ಬದುಕುವುದು ಸಹಜವಾಗಿದೆ. ಯಾವ ಮಕ್ಕಳು ಯಾವ ಕುಲಗೋತ್ರ ಎನ್ನುವುದನ್ನು ದುರ್ಬೀನು ಹಾಕಿ ನೈತಿಕ ಪೊಲೀಸ್ ಗಿರಿ ನಡೆಸುವವರು ನಮ್ಮಲ್ಲಿ ಇಲ್ಲ. ಏನಿದ್ದರೂ ಸರಕಾರಿ ಪೊಲೀಸರೆ. ಅವರಿಗೂ ನಾವು ಕೇಸ ಹಚ್ಚಿಲ್ಲ. ನೆಮ್ಮದಿಯಿಂದ ಡ್ಯೂಟಿ ಮಾಡುತ್ತಾರೆ.

ಮನೆಯಲ್ಲಿ ತಂದೆ ತಾಯಿಗಳು ನೈತಿಕ ಪೊಲೀಸರ ಭಯ ಆತಂಕ ಇಲ್ಲದ ಹಾಗೆ ಬದುಕುತ್ತಾರೆ.

ಧಾರ್ಮಿಕ ಬಹುತ್ವಕ್ಕೆ, ಸಾಮರಸ್ಯಕ್ಕೆ ಕರ್ನಾಟಕ ಎಂದಿನಿಂದಲೂ ತೆರೆದುಕೊಂಡಿದೆ. ಧಾರ್ಮಿಕ ಸೌಹಾರ್ದತೆ ಒಂದು ಪ್ರದೇಶದಲ್ಲಿ ಬಹುತ್ವವನ್ನು ಉಳಿಸಿಕೊಂಡಿದೆಯೆಂದರೆ ಇದು ಯಾವ ಪರಂಪರೆ? ಇದು ಉಳಿದ ಪ್ರದೇಶಗಳಲ್ಲಿ ಏಕೆ ಕಾಣಿಸುತ್ತಿಲ್ಲ? ರಾಮ-ರಹೀಮರು ಕತ್ತಿ ಮಸೆಯುತ್ತಿರುವುದೇಕೆ? ಈ ಪ್ರಶ್ನೆಗಳನ್ನು ಪ್ರಾಂಜಲ ಮನಸ್ಸಿನಿಂದ ಚರ್ಚಿಸಬೇಕು. ಅಮಾಯಕರ ರಕ್ತ ಬೀದಿಯಲ್ಲಿ ಬೀಳದಂತೆ ನೋಡುವ ಜವಾಬ್ದಾರಿ ಬರಹಗಾರರ ಮೇಲಿದೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಎಲ್ಲಾ ದೇಶಗಳ ಶಾಂತಿಪ್ರಿಯ ಮನಸ್ಸುಗಳು ತಮ್ಮ ತಮ್ಮ ಶಕ್ತಿಗನುಗುಣವಾಗಿ ಮಾತನಾಡಿವೆ. ಚರಿತ್ರೆಯ ಪ್ರಮಾದ, ಗಾಯಗಳಿಗೆ ರಕ್ತ ಒಂದೇ ಮದ್ದಲ್ಲ. ಶಾಂತಿ, ಪ್ರೀತಿ, ನಂಬಿಕೆ, ವಿಶ್ವಾಸವೂ ಗಾಯವನ್ನು ಗುಣಪಡಿಸುವ ಔಷಧಿಗಳು ಎಂಬ ನಂಬಿಕೆ ಮರೆಯಾದ ಹೊತ್ತಿನಲ್ಲಿ ಪಾಕಿಸ್ತಾನಿ ಕವಿಯ ಪದ್ಯ ನೆನಪಾಗುತ್ತದೆ. ಘನಶ್ಯಾಂ ಅಗರ್ವಾಲ್ ಎನ್ನುವ ಪಾಕಿಸ್ತಾನದ ಕವಿ ಬರಹಗಾರರ ಹೊಣೆಗಾರಿಕೆಯ ಬಗ್ಗೆ ಹೀಗೆ ಹೇಳುತ್ತಾನೆ.

"ಈತ ರಾಜಕಾರಣಿ
ಈತ ಬಾಂಬ್ ಸೃಷ್ಟಿಸಿದ
ಈತನಿಗೆ ಹತ್ತು ಬಾರುಕೋಲಿನಿಂದ ಬಾರಿಸಿರಿ.

ಈತ ಧರ್ಮಗುರು
ಈತ ಬಾಂಬಿಗೆ ಧರ್ಮದ ಗುಣ ನೀಡಿದ
ಈತನಿಗೆ ಇಪ್ಪತ್ತು ಬಾರುಕೋಲಿನಿಂದ ಬಾರಿಸಿರಿ.

ಈತ ಕವಿ, ಲೇಖಕ, ಕಲಾವಿದ
ಈತನಿದ್ದೂ ಬಾಂಬ್ ಸೃಷ್ಟಿಯಾಯಿತು
ಈತನಿಗೆ ನೂರು ಬಾರುಕೋಲಿನಿಂದ ಬಾರಿಸಿರಿ."

ಇದನ್ನು ನಾವು ಇಂದು ಯೋಚಿಸಬೇಕಾಗಿದೆ. ಈ ಪ್ರಜ್ಞೆ ಇಲ್ಲದ ನಾವುಗಳು ಎಷ್ಟು ಚಡಿ ಏಟುಗಳನ್ನು ತಿನ್ನಬೇಕು? ಸಮಾಜ, ಜನರು

ತಪ್ಪು ಮಾಡಿದಾಗ ಅದರ ಕುರಿತು ಮಾತನಾಡಬೇಕಾದವರು ಕವಿ. ಸಾಹಿತಿ, ಕಲಾವಿದರು. ನಮ್ಮಗಳ ಆತ್ಮವಿಮರ್ಶೆಯ ಕಾಲವಿದು. ಯಾರನ್ನೂ ದೂಷಿಸುವುದಲ್ಲ. ಕಾಲಕಾಲಕ್ಕೆ ಈ ಕವಿ, ಸಾಹಿತಿ. ಕಲಾವಿದರುಗಳು ಹೇಗೆ ನಡೆದುಕೊಂಡರು ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ.

ಪ್ರಪಂಚವೇ ಜಾಗತೀಕರಣಕ್ಕೆ ತೆರೆದುಕೊಂಡಿರುವ ಈ ಹೊತ್ತಿನಲ್ಲಿ. ಹಲವಾರು ಸ್ಥಿತ್ಯಂತರಗಳು ನಡೆಯುತ್ತಿವೆ. ಈ ಸ್ಥಿತ್ಯಂತರಗಳು ಉಂಟು ಮಾಡಿದ ಪರಿಣಾಮ ಒಂದು ಸಮುದಾಯಕ್ಕೆ ಬಿಡುಗಡೆಯಂತೆ ಕಂಡರೆ. ಇನ್ನೊಂದು ಸಮುದಾಯಕ್ಕೆ ಅಸ್ತಿತ್ವವನ್ನು ನಾಶಮಾಡುವ ಭಸ್ಮಾಸುರನಂತೆ ಕಾಣಿಸುತ್ತದೆ. ಇಂತಹ ಗೊಂದಲಗಳಿಗೆ ಒಳಗಾಗಿರುವ ಹೊತ್ತಿನಲ್ಲಿ ವಿಚಾರವಂತರ, ಪ್ರಜ್ಞಾವಂತರ ನಡೆ ಹೇಗಿರಬೇಕು ಎಂಬುದೂ ಕೂಡ ಗೊಂದಲದ ಗೂಡಾಗಿದೆ. ಕಲಿಕಾ ಭಾಷೆಗೆ ಸಂಬಂಧಿಸಿ ನೋಡು ವುದಾದರೆ ದಲಿತ ಶೋಷಿತರು ಇಂಗ್ಲಿಷ್ ಮಾಧ್ಯಮದ ಶಿಕ್ಷಣ ತಮ್ಮನ್ನು ಸಾಮಾಜಿಕ ಅಪಮಾನಗಳಿಂದ ಬಿಡುಗಡೆಗೊಳಿಸುವ ಮತ್ತು ಗೌರವದ ಬದುಕು ಸಾಗಿಸಲು ಉದ್ಯೋಗ ಕೊಡಿಸುವುದು ಎಂಬ ಭರವಸೆ ಹೊಂದಿದ್ದಾರೆ. ಶಿಕ್ಷಣತಜ್ಞರು, ವಿಚಾರವಂತರು ಮಾತೃಭಾಷೆಯಲ್ಲಿಯೇ ಶಿಕ್ಷಣವನ್ನು ನೀಡಬೇಕು ಎಂದು ಒತ್ತಾಯಿಸುತ್ತಿದ್ದಾರೆ. ನೆಲದ ಭಾಷೆಯ ಮೇಲೆ ಇಂಗ್ಲೀಷ್ ಭಾಷೆ ಆಕ್ರಮಣ ಮಾಡುತ್ತಿದೆ. ಇದು ಭಾಷೆ. ಸಂಸ್ಕೃತಿ. ಬಹುತ್ವವನ್ನು ನಾಶಗೊಳಿಸುತ್ತದೆ ಎಂದು ವಾದಿಸುತ್ತಾರೆ. ಇಂಗ್ಲೀಷ್ ಕಲಿಕೆಯ ಬಗ್ಗೆ ಶೂದ್ರ ಸಮುದಾಯ ತೋರುತ್ತಿರುವ ಒಲವುಗಳಿಗೆ ಸಾಮಾಜಿಕ ಕಾರಣಗಳಿವೆ. ಅಕ್ಷರಗಳಿಂದ ವಂಚಿತರಾದ ಸಮಾಜದಲ್ಲಿ ಶತಮಾನಗಳುದ್ದಕ್ಕೂ ಜ್ಞಾನದಿಂದ ದೂರವಿದ್ದವನಿಗೆ ಇಂಗ್ಲೀಷ್ ಕಲಿಕೆಯು ಶಿಕ್ಷಣದ ಕಿಟಕಿಯೊಂದು ಜಗತ್ತನ್ನು ತೋರಿಸುತ್ತಿರುವ ಹೊತ್ತಿನಲ್ಲಿ ಅವರು ಅದನ್ನು ಸ್ವಾಗತಿಸುವುದು ತಪ್ಪೆಂದು ಹೇಗೆ ಹೇಳುವುದು? ಹೇಳುವ ವಿಧಾನಗಳು ಹಳೆಯ ಮಾದರಿಗಳಾಗಿರುವುದರಿಂದ ಮತ್ತು ಹೇಳುತ್ತಿರುವ ಸಮುದಾಯಗಳು ಶತಮಾನಗಳಿಂದ ಶೋಷಣೆ ಮಾಡಿದ ವಾರಸುದಾರಿಕೆ ಯನ್ನು ಹೊತ್ತವರಾಗಿರುವುದರಿಂದ ಪರಸ್ಪರ ನಂಬಿಕೆಯ ಕೊರತೆಯಿಂದ ಭಿನ್ನ ಭಿನ್ನ ಧ್ವನಿಗಳು ಕೇಳಿಸುತ್ತಿವೆ. ಹೀಗಾಗಿ ಜಾಗತೀಕರಣದ

ಅವಾಂತರಗಳನ್ನು ಚರಿತ್ರೆಯ ನೆನಪುಗಳೊಂದಿಗೆ ವಾಸ್ತವದ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯವಾಗುತ್ತಿಲ್ಲ. ಮೇಲ್ಜಾತಿ, ಮೇಲ್ವರ್ಗದ ಯುವ ಸಮುದಾಯ ಇಂಗ್ಲೀಷ್ ಭಾಷಾ ಕಲಿಕೆಯಿಂದ ದೇಶ ವಿದೇಶದಲ್ಲಿ ಪಡೆದುಕೊಂಡಿರುವ ಉದ್ಯೋಗಗಳು ಅವರ ಬದುಕಿನ ಕ್ರಮವೆಲ್ಲವೂ ಒಂದು ಭಾಷಾ ಕಲಿಕೆಯಿಂದ ಸಾಧ್ಯವಾಗಿದೆ ಎಂಬ ಅಭಿಪ್ರಾಯ ಶೂದ್ರ ಸಮುದಾಯದಲ್ಲಿ ರೂಪುಗೊಂಡಿದೆ. ಇಂದಿಗೂ ತಾವು ಆಧುನಿಕ ಶಿಕ್ಷಣದಿಂದ ವಂಚಿತರಾದ ಕಾರಣ ಮಲಹೊರುವ ಅಪಮಾನದಿಂದ ಬಿಡುಗಡೆ ಹೊಂದಲು ಸಾಧ್ಯವಾಗುತ್ತಿಲ್ಲವೆಂಬ ಸಂಕಟ ಅವರನ್ನು ಕಾಡುತ್ತಿದೆ. ಈ ಅಪಮಾನವನ್ನು ಇಂಗ್ಲೀಷ್ ಶಿಕ್ಷಣ ಅದು ದೊರಕಿಸಿಕೊಡಬಹುದಾದ ಉದ್ಯೋಗ, ಗೌರವ ತರಬಲ್ಲದೆಂಬ ಭರವಸೆ ಅವರಿಗಿದೆ.

ಭಾಷೆ, ಬಣ್ಣ, ಜ್ಞಾನ ಎಂದಿನಿಂದಲೂ ಜಗತ್ತನ್ನು ಆಳಿವೆ. ಇಂದು ಜಾಗತೀಕರಣ ಈ ಮೂರನ್ನೂ ಮುದ್ರಿಸುತ್ತಿದೆ. ಅಕ್ಷರದಿಂದ ವಂಚಿತವಾದ ಸಮುದಾಯಗಳು ಅಕ್ಷರದ ಬಾಗಿಲಿನಿಂದ ಹೊರಜಗತ್ತಿನಲ್ಲಿ ಉದ್ಯೋಗ ಬಯಸಿ, ಸಿಗದೇ ಹೋದಾಗ ಕಾರಣಗಳನ್ನು ಸಹಜವಾಗಿ ಹುಡುಕುತ್ತವೆ. ಆದರೆ ವಾಸ್ತವದಲ್ಲಿ ಮತ್ತೆ ಅದೇ ಹಳೆಯ ಆಯುಧಗಳು ಝಳಪಿಸುತ್ತವೆ. ಕುಲ ಮೀಮಾಂಸೆಯ ಹಿಂಸೆಯಿಂದ ಬಿಡುಗಡೆ ಹೊಂದಲು ಅಕ್ಷರದ ಚಿಕ್ಕ ಕಿಟಕಿಯ ಮೂಲಕ ಹೊರಜಗತ್ತಿಗೆ ಹಾರಬೇಕೆಂಬ ಶೂದ್ರ ಸಮುದಾಯಗಳ ತುಡಿತವನ್ನು ಹೇಗೆ ನಿರಾಕರಿಸುವುದು? ನಿಸರ್ಗ ಮೂಲದ ಪಾರಂಪರಿಕ ಸ್ಥಳೀಯ ಜ್ಞಾನಗಳು ದುಡಿಮೆಯನ್ನು ಕೊಡಿಸಲಾರವು ಎಂಬ ಸಂಕಟಕ್ಕೆ ಒಳಗಾದ ಜನರು ಇಷ್ಟಪಟ್ಟು ಇಂಗ್ಲೀಷಿನ ಅಗ್ನಿಗೆ ಹಾರುತ್ತಿರುವರು. ಯಾಕೆಂದರೆ ಅವರು ನಿತ್ಯ ಅಗ್ನಿಕುಂಡದಲ್ಲಿಯೇ ಇರುವಂತೆ ಮಾಡಿದ್ದೇವೆ ನೋಡಿ. ಈ ಇಂಗ್ಲೀಷ್ ಮೋಹವನ್ನು ಶಿಕ್ಷಣ ಮಾಫಿಯಾ ಬಂಡವಾಳ ಮಾಡಿಕೊಳ್ಳಲು ಬಣ್ಣಬಣ್ಣದ ಆಮಿಷಗಳನ್ನು ಒಡ್ಡಿದೆ. ಶಿಕ್ಷಣವೆಂಬುದು ಹೊಟ್ಟೆತುಂಬಿದವರಿಗೆ ಜ್ಞಾನವಾಗಿ ಕಂಡರೆ, ಹಸಿದವರಿಗೆ ಉದ್ಯೋಗ ನೀಡುವ ಬಹುದೊಡ್ಡ ಶಕ್ತಿಯಾಗಿ ಕಾಣಿಸಿದೆ. ಶಿಕ್ಷಣದ ಖಾಸಗೀಕರಣದಿಂದ ದುಡಿಯುವ ವರ್ಗದ ಮಕ್ಕಳಿಗೆ ಹೋಗಲಿ ಮಧ್ಯಮವರ್ಗಕ್ಕೂ ಕೈಗೆಟುಕುವ ಸಂಗತಿಯಾಗಿ ಉಳಿದಿಲ್ಲವೆಂಬುದು ವಾಸ್ತವ ಕಟುಸತ್ಯ.

ಸರಕಾರಿ, ಅರೆಸರಕಾರಿ, ಖಾಸಗಿ, ಕೇಂದ್ರ ಸರಕಾರದ ಶಾಲಾ ಕಾಲೇಜುಗಳ ಮಧ್ಯೆ ತುಂಬಲಾರದ ಕಂದಕವಿದೆ. ಯಾವ ಶಾಲೆಯಲ್ಲಿ, ಯಾವ ಮಾಧ್ಯಮದಲ್ಲಿ ಕಲಿತರೆ ಉದ್ಯೋಗ ಸಿಗಲು ಸಾಧ್ಯವೆಂಬ ಲೆಕ್ಕಾಚಾರದಲ್ಲಿ ಪಾಲಕರು ಮಕ್ಕಳನ್ನು ಶಾಲೆಗಳಿಗೆ ದಬ್ಬುತ್ತಿದ್ದಾರೆ. ಇಂದು ಜ್ಞಾನಕ್ಕಿಂತಲೂ ಶೈಲಿ ಮುಖ್ಯವಾಗಿದೆ. ಕೌಶಲ್ಯ ಪ್ರಧಾನವಾಗಿದೆ. ಈ ಕೌಶಲ್ಯ, ಶೈಲಿಯನ್ನೇ ಪ್ರಧಾನವಾಗಿ ಕಲಿಸುವ ಶಿಕ್ಷಣ ಸಂಸ್ಥೆಗಳು ಅಕ್ಷರಗಳನ್ನು ಮಾರುತ್ತಿವೆ. ಎಲ್ಲಾ ವರ್ಗದ ಜನರು ತಮ್ಮ ಮಕ್ಕಳು ವಿದೇಶದಲ್ಲಿ ಉದ್ಯೋಗ ಮಾಡಬೇಕು ಎಂಬ ದೂರದ ಆಸೆಗಾಗಿ ಭರವಸೆಯಿಂದ ಮಕ್ಕಳ ಮೇಲೆ ಲಕ್ಷ ಲಕ್ಷ ಬಂಡವಾಳವನ್ನು ಎಗ್ಗಿಲ್ಲದೇ ಸುರಿಯುತ್ತಿರುವರು. ಇಂತಹ ಹೊತ್ತಿನಲ್ಲಿ ಅಕ್ಷರಗಳನ್ನು ಮಾರಿ ಬದುಕುತ್ತಿರುವ ಶಿಕ್ಷಣ ಸಂಸ್ಥೆಗಳ ಸಾಮಾಜಿಕ ಜವಾಬ್ದಾರಿಯಾದರೂ ಏನು? ಎಂಬುದರ ಕುರಿತು ಮುಕ್ತ ಚರ್ಚೆ ನಡೆಯಬೇಕು. ಸರಕಾರವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವಷ್ಟು ಖಾಸಗಿ ಶಿಕ್ಷಣ ಸಂಸ್ಥೆಗಳು ಬಲಿಷ್ಠವಾಗಿವೆ. ಅಷ್ಟೇ ಏಕೆ ಸ್ವತಃ ಮಂತ್ರಿಮಹೋದಯರೇ ಅಕ್ಷರ ಮಾರುವ ಮಾಲ್‌ಗಳನ್ನೇ ತೆರೆದಿರುವರು. ಶಿಕ್ಷಣ, ಆರೋಗ್ಯ, ಆಹಾರ, ವಸತಿ ಈ ಸಂಗತಿಗಳು ರಾಷ್ಟ್ರೀಕರಣಗೊಳ್ಳಬೇಕು. ಸಮಾಜದ ಕಟ್ಟಕಡೆಯ ಮನುಷ್ಯನಿಗೂ ಎಲ್ಲವೂ ನಿಲುಕುವಂತೆ ಆದಾಗ ಕಲಿಕಾ ಮಾಧ್ಯಮದ ಬಗ್ಗೆ ಮಾತನಾಡಿದರೆ ಅಕ್ಷರ ವಂಚಿತ ಲೋಕ ಕೇಳಬಲ್ಲದು.

ಬಹುತ್ವವನ್ನು ನಾಶಮಾಡುವ ಪ್ರಯತ್ನಗಳು ಬಹು ಸೂಕ್ಷ್ಮವಾಗಿವೆ. ಏಕರೂಪದ ಪಠ್ಯ, ರುಚಿ ವೈವಿಧ್ಯತೆಯಿಲ್ಲದ ಏಕರೂಪದ ಆಹಾರ ಪದ್ಧತಿ, ಬಣ್ಣದ ಬೆರಗನ್ನು ಮರೆಸುವ ಉಡುಗೆಯ ಏಕತೆ. ಇವೆಲ್ಲವೂ ಸದ್ದಿಲ್ಲದ ಹಾಗೆ ನಮ್ಮೊಳಗೆ ಪ್ರವೇಶಿಸುತ್ತಿವೆ. ಮುಂದಿನ ದಿನಗಳಲ್ಲಿ ಬಹುತ್ವದ ನಾಶಕ್ಕೆ ಯುದ್ಧವೇ ಆಗಬೇಕಿಂದಿಲ್ಲ. ನಮ್ಮೊಳಗಿನ ಏಕರೂಪಿ ಅಸ್ತ್ರವೇ ನಮ್ಮನ್ನು ಸಾಣೆ ಹಿಡಿದು ತನ್ನ ಆಕಾರಕ್ಕೆ ಒಗ್ಗಿಸಿಕೊಳ್ಳುತ್ತದೆ ಎಂಬುದು ಬಹುದೂರದ ಆತಂಕವಲ್ಲ ಕಣ್ಣೆದುರಿನ ಸಂಕಟ. ಯಂತ್ರ ನಾಗರೀಕತೆ. ನಿಸರ್ಗವನ್ನು ಮಣಿಸಲು ಹೊರಟಿದೆ. ಇದರ ನೇರವಾದ ಪರಿಣಾಮ ಈ ದೇಶದ ಬೆನ್ನೆಲುಬಾದ ಕೃಷಿಯ ಮೇಲೆ ಕೃಷಿಕನ ಮೇಲೆ ಆಗುತ್ತಿದೆ. ರೈತ ಈ ನೆಲದ ಚೊಚ್ಚಲು ಮಗ. ಆವನ ಅಸ್ತಿತ್ವಕ್ಕೆ

ಆತಂಕ ಎದುರಾಗಿದೆ. ನಮ್ಮ ದುರಾಸೆಯಿಂದ ಪ್ರಕೃತಿ ನಾಶ. ಅದರಿಂದ ಋತು ಚಕ್ರದಲ್ಲಿ ಏರಿಳಿತ. ಋತುಚಕ್ರಕ್ಕನುಗುಣವಾಗಿ ವೈಜ್ಞಾನಿಕ ಕೃಷಿ ಪದ್ಧತಿ ಕೃಷಿಕನ ಕೈಗೆ ಎಟುಕದೆ ಹೋಗಿರುವುದರಿಂದ ರೈತ ಆತ್ಮಹತ್ಯೆಗೆ ಒಳಗಾಗುತ್ತಿರುವನು. ಮಳೆಕಾಣದ, ನೀರಿಲ್ಲದ ದೇಶಗಳು ಸಮುದ್ರದ ನೀರನ್ನು ಬಳಸಿಕೊಂಡು ಕೃಷಿಯಲ್ಲಿ ಸಾಧಿಸಿದ ಸಾಧನೆ ಮತ್ತು ದೇಶದ ಪರಿಸರನಾಶಗೊಳ್ಳದ ಹಾಗೆ ಪರ್ಯಾಯ ಆದಾಯದ ಮಾರ್ಗಗಳನ್ನು ಹುಡುಕಿಕೊಂಡಿರುವುದರ ಕುರಿತು ಚರ್ಚೆಗಳಾಗಬೇಕು. ರೈತನನ್ನು ನೇಗಿಲಯೋಗಿಯೆಂದು ಕರೆದ ಕುವೆಂಪು ಅವರ ವಿಚಾರಗಳನ್ನು ಮತ್ತೆ ಮುಂಚೂಣಿಗೆ ತರಬೇಕು. ದೇಶದಲ್ಲಿ ಎಲ್ಲದಕ್ಕೂ ನೀತಿಗಳನ್ನು ರೂಪಿಸಿದ್ದೇವೆ. ಆದರೆ ಕೃಷಿಗೆ ನೀತಿಯೊಂದು ಬೇಕು ಎಂಬುದೆ ಇಂದಿಗೂ ನಮಗೆ ಅನಿಸುತ್ತಿಲ್ಲ. ಉತ್ಪಾದಿತ ಎಲ್ಲ ವಸ್ತುಗಳಿಗೂ ಮಾಲೀಕರು ಬೆಲೆ ನಿಗದಿಗೊಳಿಸುತ್ತಾರೆ. ಗ್ರಾಹಕರು ಚೌಕಾಸಿ ಮಾಡದೆ ಕೊಂಡುಕೊಳ್ಳುತ್ತೇವೆ. ಆದರೆ ರೈತ ಬೆಳೆದ ಉತ್ಪಾದಿಸಿದ ವಸ್ತುಗಳಿಗೆ ಬೆಲೆ ನಿಗದಿಗೊಳಿಸುವ ಹಕ್ಕನ್ನು ಅವನಿಗೆ ನೀಡಿಲ್ಲ. ಹಗಲು ರಾತ್ರಿ ಬೆವರು ಸುರಿಸಿ ಬೆಳೆದ ಬೆಳೆಗೆ ಬೆಲೆಯಿಲ್ಲದೆ ಬೀದಿಗೆ ಚೆಲ್ಲಿ ಹೋಗುವ ರೈತನ ಅಸಹಾಯಕತೆ ಆಕ್ರೋಶವಾಗುವ ಮೊದಲೆ ಆಡಳಿತ, ಸಮಾಜ ಈ ಕುರಿತು ಗಂಭೀರವಾಗಿ ಚಿಂತನೆ ನಡೆಸಬೇಕು.

ಈ ಸಮಾವೇಶದಲ್ಲಿ ಭಾಗವಹಿಸಿದ ಮತ್ತು ಇಲ್ಲಿ ಓದುತ್ತಿರುವ ಸಾವಿರಾರು ಮಕ್ಕಳನ್ನು ನೋಡಿದ ಮೇಲೆ ಒಂದು ಬಲ್ಗೇರಿಯನ್ ಕಥೆ ಹೇಳಬೇಕೆನಿಸುತ್ತಿದೆ. ಬಿ.ವಿ.ವೀರಭದ್ರಪ್ಪ ಅವರು ಅನುವಾದಿಸಿದ ವೇದಾಂತ ರೆಜಿಮೆಂಟಿನಲ್ಲಿ ಈ ಕಥೆ ಇದೆ. ಆ ಕಥೆ ಹೀಗಿದೆ "ಒಂದು ದೇಶದಲ್ಲಿ ಒಬ್ಬ ಯುವಕನಿದ್ದ. ಅವನು ಸಿಟ್ಟಿನಿಂದ ಬುಸುಗುಡುತ್ತಿದ್ದಾನೆ. ಆ ಸಿಟ್ಟಿಗೆ ಕಾರಣ ಅವನ ಜನರೆಲ್ಲ ದುಃಖದಲ್ಲಿರುವರು. ರಾಜ ಆ ದುಃಖಕ್ಕೆ ಕಾರಣನಾಗಿರುವವನು. ಆ ರಾಜನ ಮೇಲೆ ಆಕ್ರಮಣ ಮಾಡಿ ಅವನನ್ನು ಸೋಲಿಸಿ ತನ್ನ ಜನರ ದುಃಖ ನಿವಾರಿಸಬೇಕೆಂದು ರಾಜನ ಕಡೆಗೆ ಮುನ್ನುಗ್ಗುತ್ತಾನೆ. ಯುವಕನ ಸಿಟ್ಟಿಗೆ ಸುಟ್ಟು ಬೂದಿಯಾಗಲು ರಾಜನೇನು ಪುರಲೆಕಡ್ಡಿಯಲ್ಲ. ರಾಜನನ್ನು ಮುಟ್ಟಬೇಕೆಂದರೆ ಮೂರು ಮೆಟ್ಟಿಲನ್ನು ಏರಿ ಹೋಗಬೇಕು. ಆ ಮೂರು ಮೆಟ್ಟಿಲನ್ನು ದೆವ್ವವೊಂದು

ಉಳಿಸಬೇಕಲ್ಲವೆ? ಯಾರು ಉಳಿಸಬೇಕು? ಹೇಗೆ ಉಳಿಸಬೇಕು? ಎಂಬುದನ್ನು ಕಾಲ ನಿರ್ಧರಿಸುತ್ತದೆ ಎಂದು ಹೇಳಿ ಹೊಣೆಗಾರಿಕೆಯಿಂದ ಪ್ರಜ್ಞಾವಂತರು ನುಣುಚಿಕೊಳ್ಳಬಾರದೆಂದು ವಿನಂತಿಸಿಕೊಳ್ಳುತ್ತಾ ನನ್ನ ಮಾತು ಮುಗಿಸುತ್ತೇನೆ.

ಗ್ರಂಥಋಣ

೧. ಕನ್ನಡಿಗಳೆ ಕಿಟಕಿಗಳಾಗಿರುವಲ್ಲಿ : ಎ.ಕೆ. ರಾಮಾನುಜನ್: ಅನು: ಓ.ಎಲ್. ನಾಗಭೂಷಣಸ್ವಾಮಿ: ಎ.ಕೆ. ರಾಮಾನುಜನ್ ಆಯ್ದ ಪ್ರಬಂಧಗಳು: ಪುಟ ೩

೨. ಅದೇ ಪುಟ ೩-೪

೩. ಕುವೆಂಪು ಸಮಗ್ರ ಕಾವ್ಯ ಸಂಪುಟ ೧

೪. ತತ್ವಪದಗಳು

೫. ನುಡಿಸಂಕರ : ಡಾ. ರಹಮತ್ ತರೀಕೆರೆ : (ಪ್ರಸ್ತಾವನೆಯಿಂದ) : ಪ್ರ: ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಹಲವು ತೋಟದ ಹೂಗಳು : ಸಂ.ಕಾಳೇಗೌಡ ನಾಗವಾರ : ಜಿ.ವಿ.ಆನಂದಮೂರ್ತಿ

******

ಕನ್ನಡದ ಖ್ಯಾತ ಸಾಹಿತಿ, ಪ್ರಾಧ್ಯಾಪಕಿ,
ಸ್ತ್ರೀನಿಷ್ಠ ವಿಮರ್ಶಕಿ, ಸಂಶೋಧಕಿ, ಸಂಪಾದಕಿ
ಹೀಗೆ ಬಹುಮುಖ ಪ್ರತಿಭೆಯ
ಡಾ. ಮಲ್ಲಿಕಾ ಎಸ್. ಘಂಟಿಯವರು
ಆಳ್ವಾಸ್ ನುಡಿಸಿರಿ 2018ರ ಸರ್ವಾಧ್ಯಕ್ಷರು.
ಸಮರ್ಥ ಆಡಳಿತಗಾರರಾಗಿಯೂ ಸಂಘಟಕರಾಗಿಯೂ
ಕನ್ನಡಪರ ಹೋರಾಟಗಾರರಾಗಿಯೂ ಖ್ಯಾತರಾದ
ಮಲ್ಲಿಕಾ ಎಸ್. ಘಂಟಿಯವರ ಸರ್ವಾಧ್ಯಕ್ಷ ಭಾಷಣದ
ಅಕ್ಷರ ರೂಪವಾಗಿ ಈ ಪುಟ್ಟ ಕೃತಿ ಮೈದಾಳುತ್ತಿದೆ.
ಅವರ ಸರ್ವಾಧ್ಯಕ್ಷ ಭಾಷಣದ ಪಾಂಡಿತ್ಯಪೂರ್ಣ ನುಡಿಗಳು
ಆರೋಗ್ಯಪೂರ್ಣ ವಾಗ್ವಾದಗಳನ್ನು ಹುಟ್ಟುಹಾಕಲಿ
ಎಂಬುದು ನಮ್ಮ ಆಸೆ.

ಡಾ। ಎಂ. ಮೋಹನ ಆಳ್ವ